ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೦೬, ಆಗಸ್ಟ್, ೨೦೨೬ (ಶ್ರಾವಣ, ೧೫, ಶಕವರ್ಷ, ೧೯೪೮)	ಸಂಚಿಕೆ ೧೫೪
Volume - 161	BENGALURU, THURSDAY, 06, AUGUST, 2026 (SHRAVANA ,15,ShakaVarsha,1948)	Issue 154

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಸಂಖ್ಯೆ.ಸಿಆಸುಇ 5 ವಿಎಂಎಸ್ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:16.07.2026

ಅಧಿಸೂಚನೆ

ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 4(1) (ಎ)ರಡಿ ಮಾಹಿತಿಯನ್ನು **ಅನುಬಂಧ-1**ರಲ್ಲಿ ಮತ್ತು ಕಲಂ 4(1) (ಬಿ) ರಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರತಿಯೊಂದು ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಮಾಹಿತಿ ಹಾಗೂ ಸದರಿ ಅಧಿಕಾರಿಗಳು/ಸಿಬ್ಬಂದಿ ವರ್ಗದವರುಗಳಿಗೆ ನಿಯಮಾನುಸಾರ ಹಂಚಿಕೆ ಮಾಡಲಾಗಿರುವ ವಿಷಯಗಳು, ನಿಗದಿಪಡಿಸಿರುವ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಒಳಗೊಂಡ ಕೈಪಿಡಿಯನ್ನು **ಅನುಬಂಧ-2**ರಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತಾ ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇಲಾಖೆ (ಜಾಗೃತ ವಿಭಾಗ).

ಅನುಬಂಧ-1

ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 4 (1) (ಎ)ಗೆ ಮಾಹಿತಿ:

1. ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು, ಈ ಅಧಿನಿಯಮದಡಿಯಲ್ಲಿ ಮಾಹಿತಿ ಹಕ್ಕಿಗಾಗಿ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಕ್ರಮಬದ್ಧ ಸೂಚಿಪಟ್ಟಿ ಮತ್ತು ಸೂಚೀಕರಣಗೊಂಡ ಅದರ ಎಲ್ಲಾ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಸೂಕ್ತ ಸಮಯದೊಳಗಾಗಿ ಮತ್ತು ಸಂಪನ್ಮೂಲಗಳ ಲಭ್ಯತೆಗೊಳಪಟ್ಟು, ಗಣಕೀಕರಣಕ್ಕೆ ಸೂಕ್ತವಾದ ಎಲ್ಲಾ ದಾಖಲೆಗಳನ್ನು ಗಣಕೀಕರಿಸುವಂತೆ ಮತ್ತು ಅಂತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ದೇಶಾದ್ಯಂತ ವಿವಿಧ ಸಿಸ್ಟಂಗಳಲ್ಲಿ ಸಂಪರ್ಕಜಾಲದ ಮೂಲಕ ಸಂಪರ್ಕ ಕಲ್ಪಿಸುವಂತೆ ಮಾಡತಕ್ಕದ್ದು;

2. ಕರ್ನಾಟಕ ಸರ್ಕಾರದ ಸಚಿವಾಲಯದ ಇಲಾಖೆಗಳಲ್ಲಿನ ಪತ್ರ ಹಾಗೂ ಕಡತಗಳ ಚಲನವಲನ ಹಿಂದಿನ ಮತ್ತು ಇಂದಿನ ಸ್ಥಿತಿಯ ಮಾಹಿತಿ ನಿರ್ವಹಿಸಲು ಇ-ಆಫೀಸ್ ಎಂಬ ತಂತ್ರಾಂಶವನ್ನು ಚಾಲನೆಗೊಳಿಸಲಾಗಿದೆ. ಅದರಡಿಯಲ್ಲಿ ಆಯಾಯ ಇಲಾಖೆಯಲ್ಲಿನ ಪ್ರತಿಯೊಂದು ಕಡತ ಮತ್ತು ಪತ್ರದ ವಿಷಯವನ್ನು ನಮೂದಿಸಲಾಗುತ್ತಿದೆ ಮತ್ತು ಪ್ರತಿಯೊಂದು ಕಡತ ಮತ್ತು ಪತ್ರಕ್ಕೆ ಕಂಪ್ಯೂಟರ್ ಸಂಖ್ಯೆಯನ್ನು ನೀಡಲಾಗುತ್ತಿದೆ. ಜನಸಾಮಾನ್ಯರು ಮತ್ತು ಸರ್ಕಾರದ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಉಪಯೋಗಕ್ಕಾಗಿ ಸರ್ಕಾರದ ಆದೇಶಗಳು, ಸುತ್ತೋಲೆಗಳು, ಅಧಿಸೂಚನೆಗಳು ಮತ್ತು ತಿದ್ದೋಲೆ ಅಥವಾ ಸೇರ್ಪಡೆಗಳನ್ನು ಸಚಿವಾಲಯದ ಅಂತರ್ಜಾಲ https://karnataka.gov.in ರಲ್ಲಿ ಲಭ್ಯಪಡಿಸಲಾಗಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಪಡೆದುಕೊಳ್ಳಬಹುದು.

ಅನುಬಂಧ-2

ಕರ್ನಾಟಕ ಸರ್ಕಾರದ ಸಚಿವಾಲಯ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಾಹಿತಿ ಹಕ್ಕು ಕೈಪಿಡಿ

ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4 (1) (ಬಿ) ಅನ್ವಯ
(ಮಾರ್ಚ್ 2026ರ ಅಂತ್ಯಕ್ಕೆ)

Website:https://dpar.karnataka.gov.in

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಂಸ್ಥಾ ಪಟ್ಟಿ.


ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಸರ್ಕಾರದ ಕಾರ್ಯದರ್ಶಿಗಳು
ಸರ್ಕಾರದ ಅಪರ ಕಾರ್ಯದರ್ಶಿ (ಸೇ.ನಿ.)
ಸ.ಉ.ಕಾ (ಸಿಬ್ಬಂದಿ)
ಸ.ಉ.ಕಾ (ರಾ.ಶಿ)
ಸರ್ಕಾರದ ಉ.ಕಾ. (ಕೆಂ. ಅಂ. ವಿ. ನಿ.)
ಸರ್ಕಾರದ ಜಂ.ಕಾ. (ಸೇವೆಗಳು)
ಸರ್ಕಾರದ ಅಪರಕಾರ್ಯದರ್ಶಿ
ಸರ್ಕಾರದ ಅಪರ ಕಾರ್ಯದರ್ಶಿ (ಜಾಗೃತ ವಿಭಾಗ)
ಸರ್ಕಾರದ ಉ.ಕಾ. (ಸೇ.ನಿ.-1)
ಸರ್ಕಾರದ ಉ.ಕಾ. (ಸೇ.ನಿ. 2)
ಸರ್ಕಾರದ ಉ.ಕಾ. (ಸೇ.ನಿ. -3)
1)ಅ.ಕಾ .(ಆ-1) 2) ಅ.ಕಾ. (ಸಿಬ್ಬಂದಿ) 3) ಅ.ಕಾ .(ಲೆ.ಪ.-1 4) ಅ.ಕಾ. (ಲೆ.ಪ.-3)
1)ಅ.ಕಾ. (ರಾ.ಶಿ.- 2)ಅ.ಕಾ. (ರಾ.ಶಿ.- 3)ಅ.ಕಾ. (ರಾ.ಶಿ.- ವಿ.ಕೋ)
ಅ.ಕಾ. (ಕೆಂ.ಅಂ.ರಾ.ವಿ.ನಿ.)
1)ಅಕಾ (ಸೇ-1) 2) ಅಕಾ (ಸೇ-2) 3) ಅಕಾ (ಸೇ-3) 4) ಅಕಾ (ಸೇ-4) 5) ಅಕಾ (ಸೇ-5) 6) ಅಕಾ (ಸೇ-6) 7) ಅಕಾ (ಸೇ-7) 8) ಅಕಾ (ಐಆರ್ಎಲ್ಎ)
ಸರ್ಕಾರದ ಉ.ಕಾ. (ಆಡಳಿತ)
1)ಅ.ಕಾ. (ಆ-2) 2)ಅ.ಕಾ. (ಆ-3) 3)ಅ.ಕಾ. (ಆ.ಕೋ)
ಸರ್ಕಾರದ ಉ.ಕಾ. (ಕಾರ್ಯ ಕಾರಿ)
1)ಅ.ಕಾ. (ಕಾರ್ಯಕಾರಿ) 2)ಅ.ಕಾ. (ರಾಜಕೀಯ)
ಅ.ಕಾ. (ಜಾಗೃತ ವಿಭಾಗ)
ಅಕಾ (ಸೇ.ನಿ.-1)
ಅಕಾ (ಸೇ.ನಿ.-2)
ಅಕಾ (ಸೇ.ನಿ.-3)


ಅ.ಕಾ (ಆಡಳಿತ-1)
ಅ.ಕಾ (ಆಡಳಿತ-2)
ಅ.ಕಾ (ಆಡಳಿತ-3)
ಅ.ಕಾ (ಆಡಳಿತ ಕೋಶ)
ಶಾಖಾಧಿಕಾರಿ-ಆಡಳಿತ ಎ
ಶಾಖಾಧಿಕಾರಿ-ಆಡಳಿತ ಬಿ
ಶಾಖಾಧಿಕಾರಿ- ಸ್ವೀಕೃತ & ರವಾನೆ
ಶಾಖಾಧಿಕಾರಿ- ಆಡಳಿತ ಸಿ
ಶಾಖಾಧಿಕಾರಿ-ಆಡಳಿತ ಡಿ
ಶಾಖಾಧಿಕಾರಿ- ಆಡಳಿತ-ಇ
ಶಾಖಾಧಿಕಾರಿ-ಸಾಮಾನ್ಯ ರವಾನೆ
ಶಾಖಾಧಿಕಾರಿ (ಆಡಳಿತ ಕೋಶ


ಅ.ಕಾ. (ಸಿಬ್ಬಂದಿ)
ಅ.ಕಾ. (ಲೆಕ್ಕಪತ್ರ-1)
ಅ.ಕಾ. (ಲೆಕ್ಕಪತ್ರ-3)
ಅ.ಕಾ (ರಾ.ಶಿ)
ಶಾಖಾಧಿಕಾರಿ – ಸಿಬ್ಬಂದಿ
ಶಾಖಾಧಿಕಾರಿ- ಸಿಬ್ಬಂದಿ 2
ಶಾಖಾಧಿಕಾರಿ-ಬಹುಪ್ರತಿ
ಶಾಖಾಧಿಕಾರಿ- ಲೆಕ್ಕಪತ್ರ –ಎ
ಶಾಖಾಧಿಕಾರಿ- ಲೆಕ್ಕಪತ್ರ-ಬಿ
ಶಾಖಾಧಿಕಾರಿ- ಲೆಕ್ಕಪತ್ರ-ಸಿ
ಶಾಖಾಧಿಕಾರಿ – ಆಯವ್ಯಯ ಮತ್ತು ಸಾವಿಯೋ
ಶಾಖಾಧಿಕಾರಿ-ನಗದು 1
ಶಾಖಾಧಿಕಾರಿ-ನಗದು 2
ಶಾಖಾಧಿಕಾರಿ- ಸಾಮಾನ್ಯ -ಎ


ಅ.ಕಾ (ರಾ.ಶಿ)
ಅ.ಕಾ (ವಿ.ಕೋ)
ಅ.ಕಾ (ಕೆ.ಅಂ.ನಿ.ನಿ)
ಅ.ಕಾ (ಕಾರ್ಯಕಾರಿ)
ಶಾಖಾಧಿಕಾರಿ (ಸಾಮಾನ್ಯ -ಬಿ) ಲೆಕ್ಕಾಧೀಕ್ಷಕರು-(ಸಾಮಾನ್ಯ -ಸಿ)
ಶಾಖಾಧಿಕಾರಿ- ವಿ.ಕೋ
ಶಾಖಾಧಿಕಾರಿ -1, ಶಾಖಾಧಿಕಾರಿ-2 ಶಾಖಾಧಿಕಾರಿ-3
ಶಾಖಾಧಿಕಾರಿ (ಕಾರ್ಯಕಾರಿ-ಎ) ಶಾಖಾಧಿಕಾರಿ (ಕಾರ್ಯಕಾರಿ-ಬಿ) ಶಾಖಾಧಿಕಾರಿ (ಕಾರ್ಯಕಾರಿ) (ಮಾಹಿತಿ ಕೇಂದ್ರ) ಶಾಖಾಧಿಕಾರಿ (ಕಾರ್ಯಕಾರಿ) (ದೇವರಾಜು ಅರಸು ಗೇಟ್) ಶಾಖಾಧಿಕಾರಿ (ಕಾರ್ಯಕಾರಿ) (ಗೋಪಾಲಗೌಡ ಗೇಟ್) ವಿಶೇಷಾಧಿಕಾರಿ (ಕಾರ್ಯಕಾರಿ) (ಬ.ಮ.ಕ.)


ಅ.ಕಾ. (ರಾಜಕೀಯ)
ಅ.ಕಾ. (ಜಾಗೃತ ವಿಭಾಗ)
ಅ.ಕಾ. (ಸೇ.ನಿ.-1)
ಅ.ಕಾ (ಸೇ.ನಿ.-2)
ಅ.ಕಾ. (ಸೇ.ನಿ.-3)
ಶಾಖಾಧಿಕಾರಿ (ರಾಜಕೀಯ)
ಶಾಖಾಧಿಕಾರಿ (ಜಾಗೃತ ವಿಭಾಗ)
ಶಾಖಾಧಿಕಾರಿ (ಸೇ.ನಿ.-ಎ)
ಶಾಖಾಧಿಕಾರಿ- (ಸೇ.ನಿ.-ಸಿ) ಶಾಖಾಧಿಕಾರಿ- (ಸೇ.ನಿ.-ಡಿ)
ಶಾಖಾಧಿಕಾರಿ- (ಸೇ.ನಿ.-ಬಿ) ಶಾಖಾಧಿಕಾರಿ- (ಸೇ.ನಿ.-ಎಫ್)


ಅ.ಕಾ.
(ಸೇವೆಗಳು-1)
ಶಾಖಾಧಿಕಾರಿ- (ಸೇವೆಗಳು-ಎ)
ಶಾಖಾಧಿಕಾರಿ- (ಸೇವೆಗಳು-ಎ1)
ಶಾಖಾಧಿಕಾರಿ-(ಸೇವೆಗಳು-ಜಿ)
ಅ.ಕಾ.
(ಸೇವೆಗಳು-2)
ಶಾಖಾಧಿಕಾರಿ- (ಸೇವೆಗಳು-ಸಿ)
ಶಾಖಾಧಿಕಾರಿ- (ಸೇವೆಗಳು-ಸಿ2)
ಶಾಖಾಧಿಕಾರಿ-(ಸೇವೆಗಳು-ಡಿ)
(ಸೇವೆಗಳು-ಜಿ)
ಅ.ಕಾ.
(ಸೇವೆಗಳು-3)
ಶಾಖಾಧಿಕಾರಿ-
(ಸೇವೆಗಳು-ಎಫ್)
ಅ.ಕಾ.
(ಸೇವೆಗಳು-4)
ಶಾಖಾಧಿಕಾರಿ- (ಸೇವೆಗಳು-ಹೆಚ್)
ಶಾಖಾಧಿಕಾರಿ- (ಸೇವೆಗಳು-ಐ)


ಅ.ಕಾ.
(ಸೇವೆಗಳು-5)
ಶಾಖಾಧಿಕಾರಿ-
(ಸೇವೆಗಳು-ಬಿ)
ಅ.ಕಾ.
(ಸೇವೆಗಳು-6)
ಶಾಖಾಧಿಕಾರಿ- (ಸೇವೆಗಳು-ಇ1)
ಶಾಖಾಧಿಕಾರಿ- (ಸೇವೆಗಳು-ಇ2)
ಅ.ಕಾ.
(ಸೇವೆಗಳು-7)
ಶಾಖಾಧಿಕಾರಿ- (ಕೆಪಿಎಸ್ ಸಿ-ಎ)
ಶಾಖಾಧಿಕಾರಿ- (ಕೆಪಿಎಸ್‌ಸಿ--ಬಿ)
ಅ.ಕಾ.
(ಐ.ಆರ್.ಎಲ್.ಎ)
ಶಾಖಾಧಿಕಾರಿ
(ಐ.ಆರ್.ಎಲ್.ಎ)

ವಿಶೇಷ ಸೂಚನೆ:-

1. ಸೇ.ನಿ. - ಸೇವಾ ನಿಯಮಗಳು
2. ಆ - ಆಡಳಿತ
3. ಆ.ಕೋ. - ಆಡಳಿತ ಕೋಶ
4. ವಿ.ಕೋ. - ವಿದೇಶ ಕೋಶ
5. ರಾ.ಶಿ. - ರಾಜ್ಯ ಶಿಷ್ಟಾಚಾರ
6. ಜಾ.ವಿ. - ಜಾಗೃತ ವಿಭಾಗ
7. ಅ.ಕಾ. - ಅಧೀನ ಕಾರ್ಯದರ್ಶಿ
8. ಲೆ.ಪ. - ಲೆಕ್ಕ ಪತ್ರ
9. ಉ.ಕಾ. - ಉಪ ಕಾರ್ಯದರ್ಶಿ
10. ಸಾ.ವಿ.ಯೋ. – ಸಾಮೂಹಿಕ ವಿಮಾ ಯೋಜನೆ
11. ಕೆಂ.ಅಂ.ರಾ.ವಿ.ನಿ. – ಕೆಂಪೇಗೌಡ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಛೇರಿ

4(1)(ಬಿ) (i) ಪ್ರಕಾರ್ಯಗಳು ಮತ್ತು ಕರ್ತವ್ಯಗಳು

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಾರ್ಯಾಲಯವು ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಅಂಗವಾಗಿದ್ದು, ಮುಖ್ಯ ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ಕಾರ್ಯದರ್ಶಿಯವರ ಹುದ್ದೆಯು ಭಾರತೀಯ ಆಡಳಿತ ಸೇವೆಗೆ (ಕರ್ನಾಟಕ ವೃಂದ) ಸೇರಿದ ಹುದ್ದೆಯಾಗಿರುತ್ತದೆ. ಈ ಹುದ್ದೆಯ ಅಧಿಕಾರ ಹಾಗೂ ಕರ್ತವ್ಯಗಳನ್ನು ಕರ್ನಾಟಕ ಸರ್ಕಾರದ ಕಚೇರಿ ಕಾರ್ಯವಿಧಾನದ ಪರಿಷ್ಕೃತ ಕರ್ನಾಟಕ ಸರ್ಕಾರಿ ಸಚಿವಾಲಯ ಕೈಪಿಡಿಯ (Revised Karnataka Government Secretariat Manual of Office Procedure of the Governmnet of Karnataka) ಕಂಡಿಕೆ 24, 25 ಹಾಗೂ 26 ರಲ್ಲಿ ನೀಡಲಾಗಿದ್ದು, ಅದರ ಉದ್ಧೃತ ಭಾಗವನ್ನು ಇಲ್ಲಿ ನಮೂದಿಸಲಾಗಿದೆ.

24. ಮುಖ್ಯ ಕಾರ್ಯದರ್ಶಿ:ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಯ ಆಡಳಿತ ನಿಯಂತ್ರಣಾಧಿಕಾರವು ಸರ್ಕಾರದ ಮುಖ್ಯ ಕಾರ್ಯದರ್ಶಿಯದಾಗಿರುತ್ತದೆ. ಮುಖ್ಯ ಕಾರ್ಯದರ್ಶಿಯು ಕಾಲಕಾಲಕ್ಕೆ ನೀಡಬಹುದಾದಂತಹ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೊಳಪಟ್ಟು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಆಡಳಿತ ನಿರ್ವಹಣೆ ಪ್ರಭಾರ ಹೊಂದಿರುವ ಅಧಿಕ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಹೆಚ್ಚುವರಿ ಜಂಟಿ, ಉಪ ಅಥವಾ ಅಧೀನ ಕಾರ್ಯದರ್ಶಿಗಳು ಸಚಿವಾಲಯ ಸಿಬ್ಬಂದಿ ವರ್ಗದ ನೇಮಕಾತಿ, ನಿಯುಕ್ತಿ, ರಜೆ ನಿವೃತ್ತಿ, ಶಿಸ್ತು ಕ್ರಮ ಇವುಗಳಿಗೆ ಸಂಬಂಧಪಡುವ ವಿಷಯಗಳ ಕಾರ್ಯಗಳನ್ನು ನಿರ್ವಹಿಸುತ್ತಾರೆ.

25. ಮುಖ್ಯ ಕಾರ್ಯದರ್ಶಿಯು ಸಚಿವಾಲಯದ ದಕ್ಷ ಕಾರ್ಯಾಚರಣೆ ಮತ್ತು ಸರ್ಕಾರದ ಸಮಗ್ರ ಆಡಳಿತ ವ್ಯವಸ್ಥೆಯಲ್ಲಿ ಆಡಳಿತ ಸುಧಾರಣೆಗಳ ಬಗ್ಗೆ ಸತತ ಪ್ರಯತ್ನ ಮಾಡುವ ಒಟ್ಟಾರೆ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ, ಸರ್ಕಾರಿ ಕೆಲಸಗಳ ವಿಲೆ ಮತ್ತು ಪ್ರಮಾಣದ ಪರಿಶೀಲನೆ, ಆಡಳಿತ ಸುಧಾರಣೆಗಳಲ್ಲಿನ ಸಮಸ್ಯೆಗಳ ವ್ಯವಸ್ಥಿತ ಅಧ್ಯಯನ ಇವುಗಳ ಉದ್ದೇಶಕ್ಕಾಗಿ ಆಡಳಿತ ಸುಧಾರಣಾ ವಿಭಾಗವಿದೆ. ಆಡಳಿತ ಸುಧಾರಣಾ ವಿಭಾಗವು ಅಧಿಕ ಮುಖ್ಯ ಕಾರ್ಯದರ್ಶಿಯ ವೈಯಕ್ತಿಕ ನಿರ್ದೇಶನದ ಮೇರೆಗೆ ಕೆಲಸ ನಿರ್ವಹಿಸುವುದು.

26. ಮುಖ್ಯ ಕಾರ್ಯದರ್ಶಿಯು ತನ್ನ ನೇರ ನಿಯಂತ್ರಣಕ್ಕೊಳಪಟ್ಟ ಇಲಾಖೆಗಳ ಕಾರ್ಯದರ್ಶಿಯಾಗಿ ಕರ್ತವ್ಯವನ್ನು ನಿರ್ವಹಿಸುವುದಲ್ಲದೆ, ಸಚಿವರಿಗೆ ವಹಿಸಿಕೊಟ್ಟ ಸಿಬ್ಬಂದಿಯೂ ಸೇರಿದಂತೆ ಸಮಗ್ರ ಆಡಳಿತದ ಅಧೀಕ್ಷಣ ನಿಯಂತ್ರಣವನ್ನು ಚಲಾಯಿಸುತ್ತಾನೆ ಮತ್ತು ಸಚಿವಾಲಯದ ದಕ್ಷ ಕಾರ್ಯ ನಿರ್ವಹಣೆಗೆ ಅವಶ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಹೊಂದಿರುತ್ತಾನೆ. ಮುಖ್ಯ ಕಾರ್ಯದರ್ಶಿಯು ಸಚಿವ ಸಂಪುಟದ ಕಾರ್ಯದರ್ಶಿಯೂ ಆಗಿರುತ್ತಾನೆ. ಆ ಕಾರ್ಯಗಳನ್ನು ನಿರ್ವಹಿಸಲು ಅವನು ಯಾವುದೇ ಪ್ರಕರಣಕ್ಕೆ ಸಂಬಂಧಿಸಿದ

ಯಾವುದೇ ಕಾಗದಗಳನ್ನು ತರಿಸಿಕೊಳ್ಳಬಹುದು ಮತ್ತು ಯಾವುದೇ ಇಲಾಖೆಯ ಕಾರ್ಯದರ್ಶಿ ಅಥವಾ ವಿಶೇಷ ಕಾರ್ಯದರ್ಶಿ ಅಥವಾ ಇಲಾಖಾ ಮುಖ್ಯಸ್ಥನನ್ನು ಯಾವುದೇ ಕಾಗದ ಪತ್ರಗಳನ್ನು, ಕಡತಗಳನ್ನು ಅಥವಾ ದಾಖಲೆಗಳನ್ನು ಒಪ್ಪಿಸುವಂತೆ ಕೇಳಬಹುದು."

4(1)(ಬಿ)(ii) ಅಧಿಕಾರಿಗಳ/ನೌಕರರ ಅಧಿಕಾರ ಹಾಗೂ ಕರ್ತವ್ಯಗಳು:

ಅಧೀನದ ಎಲ್ಲಾ ಶಾಖೆಗಳ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಈ ಕೆಳಗೆ ತೋರಿಸಲಾಗಿದೆ:

4(1)(ಬಿ) (iii) ಮೇಲ್ಮನವಿ ಮತ್ತು ಹೊಣೆಗಾರಿಕೆ ಮಾರ್ಗ ಒಳಗೊಂಡಂತೆ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯ ವಿಧಾನ:

ನಿರ್ಣಯವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಕರ್ನಾಟಕ ಸರ್ಕಾರದ ಕಚೇರಿ ಕಾರ್ಯವಿಧಾನದ ಪರಿಷ್ಕೃತ ಕರ್ನಾಟಕ ಸರ್ಕಾರಿ ಸಚಿವಾಲಯ ಕೈಪಿಡಿಯಂತೆ ಕಾರ್ಯ ವಿಧಾನ ಅನುಸರಿಸಲಾಗುವುದು.

4(1)(ಬಿ) (iv)ಪ್ರಕಾರ್ಯಗಳ ನಿರ್ವಹಣೆಗೆ ಅಳವಡಿಸಿಕೊಂಡಿರುವ ಸೂತ್ರಗಳು:

ಕರ್ನಾಟಕ ವ್ಯವಹಾರ ನಿರ್ವಹಣಾ ನಿಯಮಗಳು, 1977, ಮತ್ತು ಕರ್ನಾಟಕ ಸರ್ಕಾರದ ಕಚೇರಿ ಕಾರ್ಯವಿಧಾನದ ಪರಿಷ್ಕೃತ ಕರ್ನಾಟಕ ಸರ್ಕಾರಿ ಸಚಿವಾಲಯ ಕೈಪಿಡಿಯಂತೆ ಪ್ರಕಾರ್ಯಗಳ ನಿರ್ವಹಣೆ ಮಾಡಲಾಗುವುದು.

4(1)(ಬಿ)(v) ಇಲಾಖೆಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ಬಳಸುತ್ತಿರುವ ಇಲಾಖೆಯಲ್ಲಿರುವ / ಇಲಾಖೆಯ ಆಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು:

1) ಭಾರತೀಯ ಸೇವೆಗಳ ಕೈಪಿಡಿ
2) ಕರ್ನಾಟಕ ವ್ಯವಹಾರ ನಿರ್ವಹಣಾ ನಿಯಮಗಳು, 1977
3) ಕರ್ನಾಟಕ ಸರ್ಕಾರದ ಕಚೇರಿ ಕಾರ್ಯವಿಧಾನದ ಪರಿಷ್ಕೃತ ಕರ್ನಾಟಕ ಸರ್ಕಾರಿ ಸಚಿವಾಲಯ ಕೈಪಿಡಿ, 2005

4(1)(ಬಿ)(vi) ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ಸ್ವಾಧೀನದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ:

i. ಐ.ಎ.ಎಸ್., ಐ.ಪಿ.ಎಸ್. ಐ.ಎಫ್.ಎಸ್. ಅಧಿಕಾರಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು.

ii. ಕೆ.ಎ.ಎಸ್. ಅಧಿಕಾರಿಗಳ (ಹಿರಿಯ ವೇತನ ಶ್ರೇಣಿ ಹಾಗೂ ಮೇಲ್ಪಟ್ಟ ಶ್ರೇಣಿ), ಇಲಾಖಾ ಮುಖ್ಯಸ್ಥರ, ಮತ್ತು ಸರ್ಕಾರದ ಉಪ ಕಾರ್ಯದರ್ಶಿಗಳು ಹಾಗೂ ಮೇಲ್ಪಟ್ಟ ಅಧಿಕಾರಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು

4(1)(ಬಿ) (vii) ಕಾರ್ಯ ನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ ಜನ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು:

ಈ ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ವಿಷಯಗಳನ್ನು ನಿರ್ವಹಿಸುತ್ತಿರುವುದರಿಂದ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮಾಡುವ ಅಗತ್ಯವಿರುವುದಿಲ್ಲ. ಆದಾಗ್ಯೂ ಕರ್ನಾಟಕ ಲೋಕ ಸೇವಾ ಆಯೋಗ, ಕಾನೂನು ಇಲಾಖೆ, ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು), ಆರ್ಥಿಕ ಇಲಾಖೆ, ಮತ್ತು ಇತರರೊಂದಿಗೆ ಕರ್ತವ್ಯಗಳ ನಿರ್ವಹಣೆಯ ಸಲುವಾಗಿ ಸಮಾಲೋಚನೆ ನಡೆಸಲಾಗುತ್ತದೆ. ಮುಖ್ಯ ಕಾರ್ಯದರ್ಶಿಯವರು ಕಛೇರಿಯಲ್ಲಿ ಉಪಸ್ಥಿತರಿದ್ದ ಸಮಯದಲ್ಲಿ 3 ಘಂಟೆಯಿಂದ 5 ಘಂಟೆಯವರೆಗೆ ಸಾರ್ವಜನಿಕರು ಸಮಾಲೋಚನೆ ನಡೆಸಬಹುದಾಗಿದೆ.

4(1)(ಬಿ) (viii) ಸಲಹೆಯನ್ನು ಪಡೆಯುವ ಸಂಬಂಧದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳು ಮತ್ತು ಇವುಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವುದೆ:

ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳನ್ನು ಸಚಿವಾಲಯದ ಸಂಬಂಧಪಟ್ಟ ಇಲಾಖೆಗಳಲ್ಲಿ ರಚಿಸಲಾಗುತ್ತದೆ.

4(1)(ಬಿ)(ix) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ (Directory):

ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ ಪುಸ್ತಕವು ಈ ಕೆಳಕಂಡಂತಿದೆ

(ಲಗತ್ತಿಸಿದೆ)

4(1)(ಬಿ)(x) ವಿನಿಯಮ/ನಿಬಂಧನೆಗಳಲ್ಲಿ ಉಪಬಂಧಿಸಿದಂತೆ, ಪರಿಹಾರ ವ್ಯವಸ್ಥೆಯು ಸೇರಿದಂತೆ, ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿರುವ ತಿಂಗಳ ಸಂಬಳದ ವಿವರಗಳು:

ಅಧಿಕಾರಿ ಮತ್ತು ನೌಕರರು ಪಡೆಯುತ್ತಿರುವ ತಿಂಗಳ ಸಂಬಳದ ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ	ಹೆಸರು ಮತ್ತು ಪದನಾಮ	ಒಟ್ಟು ಸಂಬಳ ರೂ.
1	ಡಾ. ಶಾಲಿನಿ ರಜನೀಶ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	3,48,750/-
2	ಶ್ರೀಮತಿ ಪಲ್ಲವಿ ಅಕುರಾತಿ ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿ	2,87,640/-
3	ಶ್ರೀ ಸದಾನಂದ ಬಿ ಆಪ್ತ ಕಾರ್ಯದರ್ಶಿ(ಗ್ರೇಡ್-1)	1,96,895/-
4	ಶ್ರೀ ಹೆಚ್.ಎಂ. ಸುದರ್ಶನ್ ಅಧೀನ ಕಾರ್ಯದರ್ಶಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ	1,28,169/-
5	ಶ್ರೀ ಶಾಂತಪ್ಪ ಆರ್. ಶಾಖಾಧಿಕಾರಿ	1,08,566/-
6	ಶ್ರೀಮತಿ ವೀಣಾ ಬಿ.ಬಿ ಶಾಖಾಧಿಕಾರಿ	1,03,464/-
7	ಶ್ರೀ ಮಂಜುನಾಥ ಎಂ.ಬಿ. ಶಾಖಾಧಿಕಾರಿ	1,03,464/-
8	ಶ್ರೀ ಗೌತಮ್ ವಿ. ಹಿರಿಯ ಸಹಾಯಕರು	94,718/-
9	ಶ್ರೀ ಸಿ. ನಾಗರಾಜ್ ಹಿರಿಯ ಸಹಾಯಕರು	94,018/-
10	ಶ್ರೀಮತಿ ಉಷಾ ಎಂ.ಬಿ. ಹಿರಿಯ ಶೀಘ್ರಲಿಪಿಗಾರರು	96,483/-
11	ನಾಗಶ್ರೀ ಪತ್ರಾಂಕಿತ ಆಪ್ತ ಸಹಾಯಕರು	1,01,314
11	ವಿನೋದ್ ಟಿ.ಎಂ. ಶೀಘ್ರಲಿಪಿಗಾರರು	70,556/-
12	ರಘುನಂದನ್ ಎಸ್.ಎ ಸಹಾಯಕರು	75,155/-
13	ಸುಬೋದ್ ಸಹಾಯಕರು	68,278/-

14	ಶ್ರೀ ಬೋರೆಗೌಡ ವಾಹನ ಚಾಲಕರು (ಅನ್ಯ ಕರ್ತವ್ಯ)	68,792/-
15	ಶ್ರೀ ಆರ್ ಮೋಹನ್ ಬಾಬು ವಾಹನ ಚಾಲಕರು	84,145/-
16	ಶ್ರೀ ರೂಪೇಶ್ ಎಸ್.ಎನ್ ಅಂಗರಕ್ಷಕರು/ವಾಕಿ (ಅನ್ಯ ಕರ್ತವ್ಯ)	69,262/-
17	ಶ್ರೀ ಶಿವಕುಮಾರ ಐ.ಎಂ ಅಂಗರಕ್ಷಕರು/ವಾಕಿ (ಅನ್ಯ ಕರ್ತವ್ಯ)	69,262/-
18	ಶ್ರೀ ಮಂಜು ಎಸ್. ಎಲ್ ಹಿರಿಯ ಕಛೇರಿ ಪರಿಚಾರಕರು	73,980/-
19	ಶ್ರೀ ಮಂಜುನಾಥ ಎಸ್. ಕಛೇರಿ ಪರಿಚಾರಕರು	68,778/-
20	ಶ್ರೀ ಗೋವಿಂದರಾಜು ಹಿರಿಯ ಕಛೇರಿ ಪರಿಚಾರಕರು	55,000/-
21	ಶ್ರೀ ವಿನೋದ್ ಕುಮಾರ್ ಕೆ. ಕಛೇರಿ ಪರಿಚಾರಕರು	44781/-

4(1)(ಬಿ)(xi) ಯೋಜನೆಗಳ ವಿವರಗಳು, ಪ್ರಸ್ತಾವಿಕ ವೆಚ್ಚಗಳು ಮತ್ತು ಬಟವಾಡೆ ಮಾಡಿದ ವರದಿಗಳನ್ನೊಳಗೊಂಡಂತೆ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಆಯವ್ಯಯ:

ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಯಾವುದೇ ಯೋಜನೆಯನ್ನು ರೂಪಿಸಿರುವುದಿಲ್ಲವಾದ್ದರಿಂದ ಆಯವ್ಯಯ ಹಂಚಿಕೆಯನ್ನು ಮಾಡಿರುವುದಿಲ್ಲ.

4(1)(ಬಿ) (xii) ಹಣ ಹಂಚಿಕೆ ಮಾಡಿದ ವಿವರಗಳನ್ನೊಳಗೊಂಡಂತೆ ಕಾರ್ಯಕ್ರಮಗಳ, ಫಲಾನುಭವಿಗಳ ವಿವರ ಹಾಗೂ ಸಹಾಯ ಧನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ:

ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಯಾವುದೇ ಸಹಾಯ ಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುವುದಿಲ್ಲ.

4(1)(ಬಿ) (xiii) ರಿಯಾಯಿತಿಗಳು, ಅಪ್ಪಣೆ ಪತ್ರಗಳು ಅಥವಾ ಅಧಿಕಾರ ಪತ್ರಗಳನ್ನು ಪಡೆದವರ ವಿವರಗಳು:

ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಯಾವುದೇ ರಿಯಾಯಿತಿ, ಅಪ್ಪಣೆ ಪತ್ರ ಅಥವಾ ಅಧಿಕಾರ ಪತ್ರವನ್ನು ಮಂಜೂರು ಮಾಡಿರುವುದಿಲ್ಲ.

4(1)(ಬಿ) (xiv) ವಿಭಾಗದಲ್ಲಿ ದೊರೆಯುವ ಅಥವಾ ಹೊಂದಿರುವ, ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರಗಳು:

ಕಡತ/ಪತ್ರಗಳ ನಿರ್ವಹಣೆ ಎಲ್.ಎಂ.ಎಸ್. /ಎಫ್.ಎಂ.ಎಸ್ ಮಾಹಿತಿ ಅಕ್ಟೋಬರ್ ೨೦೦೨ರಿಂದ ವಿದ್ಯುನ್ಮಾನ ರೂಪದಲ್ಲಿ ಲಭ್ಯವಿದೆ.

4(1)(ಬಿ)(xv) ಗ್ರಂಥಾಲಯವನ್ನು ಸಾರ್ವಜನಿಕರ ಬಳಕೆಗೆ ನಿರ್ವಹಿಸಿದ್ದಲ್ಲಿ, ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲು ಇರುವ ಅನುಕೂಲತೆಗಳ ವಿವರಗಳು:

ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸಿರುವುದಿಲ್ಲ.

4(1)(ಬಿ)(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳು:

ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರಗಳು ಮತ್ತು ಪದನಾಮಗಳು	ದೂರವಾಣಿ ಸಂಖ್ಯೆ
ಶ್ರೀ ಹೆಚ್.ಎಂ. ಸುದರ್ಶನ್ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ, ಕೊಠಡಿ ಸಂಖ್ಯೆ 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು- 560 001.	22252442 22033476

ಮೇಲ್ಮನವಿ ಪ್ರಾಧಿಕಾರಿಯ ಹೆಸರು ಮತ್ತು ಪದನಾಮ

ಮೇಲ್ಮನವಿ ಪ್ರಾಧಿಕಾರಿಯ ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ
ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ, ಕೊಠಡಿ ಸಂಖ್ಯೆ 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು- 560 001.	22252442, 22033476

4(1)(ಬಿ) (xvii) ನಿಗದಿಪಡಿಸಿದ ಇತರೆ ಮಾಹಿತಿಗಳು:

ಇಲ್ಲ.

4(1)(ಬಿ) (ii) ಮತ್ತು (ix) ಕ್ಕೆ ಮಾಹಿತಿ

ಕ್ರ. ಸಂ	ಹೆಸರು ಹಾಗೂ ಪದನಾಮ	ದೂರವಾಣಿ ಸಂಖ್ಯೆ:	ಅಧಿಕಾರ, ಹೊಣೆಗಾರಿಕೆ ಮತ್ತು ಜವಾಬ್ದಾರಿ
1	ಡಾ. ಶಾಲಿನಿ ರಜನೀಶ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	22252442 22033476	ಮುಖ್ಯ ಕಾರ್ಯದರ್ಶಿ ಹುದ್ದೆಗೆ ಪ್ರದತ್ತವಾದ ಅಧಿಕಾರ ಹಾಗೂ ಕರ್ತವ್ಯಗಳ ನಿರ್ವಹಣೆ.
2	ಶ್ರೀಮತಿ ಪಲ್ಲವಿ ಅಕುರಾತಿ ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿ	22252442 22033476	ಮುಖ್ಯ ಕಾರ್ಯದರ್ಶಿಯವರ ನಿರ್ದೇಶನದಂತೆ ಆಪ್ತ ಶಾಖೆಯ ಆಡಳಿತದ ಕುರಿತಂತೆ ಕರ್ತವ್ಯಗಳು, ಮುಖ್ಯ ಕಾರ್ಯದರ್ಶಿವರ ಕಛೇರಿಗೆ ಸ್ವೀಕೃತವಾಗುವ ನ್ಯಾಯಾಲಯದ ಪ್ರಕರಣಗಳ ಕಡತಗಳು, ಸಾರ್ವಜನಿಕ ಕುಂದುಕೊರತೆ ವಿಷಯ, ಸಭೆಗಳನ್ನು ಏರ್ಪಡಿಸಲು ಮತ್ತು ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ವಿವಿಧ ಇಲಾಖೆಗಳೊಂದಿಗೆ ಸಮಾಲೋಚನೆ/ಸಮನ್ವಯ ಮುಖ್ಯ ಕಾರ್ಯದರ್ಶಿಯವರ ಹಾಗೂ ಇತರೆ

			ಸೂಚನೆಯಂತೆ ಕಾರ್ಯ ನಿರ್ವಹಿಸುವುದು. .
3	ಶ್ರೀ ಸದಾನಂದ ಬಿ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಗ್ರೇಡ್-1)	22252442 22033476	ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಹುದ್ದೆಯ ಕರ್ತವ್ಯಗಳ ನಿರ್ವಹಣೆ ಹಾಗೂ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳು, ಹಾಗೂ ಕೇಂದ್ರ ಸರ್ಕಾರದಿಂದ ಸ್ವೀಕೃತವಾಗುವ ಪತ್ರ/ಪ್ರಸ್ತಾವನೆಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ನಡೆಸುವುದು ಹಾಗೂ ಮುಖ್ಯ ಕಾರ್ಯದರ್ಶಿಯವರು ಮತ್ತು ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಯವರು ನೀಡುವ ಇತರೆ ಸೂಚನೆಯಂತೆ ಕಾರ್ಯ ನಿರ್ವಹಿಸುವುದು
4	ಶ್ರೀ ಹೆಚ್.ಎಂ. ಸುದರ್ಶನ್ ಅಧೀನ ಕಾರ್ಯದರ್ಶಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ	22252442 22033476	ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸ್ವೀಕೃತವಾಗುವ ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳು, ಮೇಲ್ಮನವಿ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು /ಕಡತಗಳ ನಿರ್ವಹಣೆ,, ಸ್ವೀಕೃತವಾಗುವ ಪತ್ರಗಳು ನಿರ್ವಹಣೆ, ರಾಜ್ಯ ಮಾನವ ಹಕ್ಕುಗಳ ಆಯೋಗ ಪ್ರಕರಣಗಳು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕ್ರಮ ವಹಿಸುವುದು.
5	ಸರ್ಕಾರದ ಅಧೀನ ಕಾರ್ಯದರ್ಶಿ-2 ಮುಖ್ಯ ಕಾರ್ಯದರ್ಶಿಯವರ ಕಛೇರಿ (ಹುದ್ದೆ ಖಾಲಿ ಇರುತ್ತದೆ)	22252442 22033476	ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಐ.ಎ.ಎಸ್. ಕೆ.ಎ.ಎಸ್, ಮತ್ತು ಮುಖ್ಯಸ್ತರುಗಳ ವಾರ್ಷಿಕ ಇಲಾಖಾ ಕಾರ್ಯ ನಿರ್ವಹಣಾ ವರದಿಗಳನ್ನು ಸಂರಕ್ಷಿಸುವ ಹಾಗೂ ಸಮರ್ಪಕವಾಗಿ ನಿರ್ವಹಿಸುವುದು. ಕೇಂದ್ರ ಮಾನವ ಹಕ್ಕುಗಳ ಆಯೋಗ ನ್ಯಾಯಾಲಯ ಪ್ರಕರಣಗಳು ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಸಂಬಂಧಿಸಿದ ಪ್ರಕರಣಗಳು ಮತ್ತು ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು.
6	ಶ್ರೀ ಶಾಂತಪ್ಪ ಆರ್. ಶಾಖಾಧಿಕಾರಿ	22252442 22033476	ಕಛೇರಿಯಲ್ಲಿ ಸ್ವೀಕೃತವಾಗುವ ಪತ್ರಗಳನ್ನು ಗುರುತಿಸುವುದು. ಅಧಿಕಾರಿಗಳು ಸಹಿ ಮಾಡಿದ ಪತ್ರಗಳನ್ನು ಇ-ಕಛೇರಿಯಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸುವುದು, ಲೇಖನ ಸಾಮಗ್ರಿಗಳ ನಿರ್ವಹಣೆ ಹಾಗೂ ಮುಖ್ಯ

			ಕಾರ್ಯದರ್ಶಿಯವರ ಆಇತ್ಯಾದಿ ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕ್ರಮ ವಹಿಸುವುದು.
7	ಶ್ರೀಮತಿ ವೀಣಾ ಶಾಖಾಧಿಕಾರಿ	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸ್ವೀಕೃತವಾಗುವ ದೈನಂದಿನ ಎಲ್ಲಾ ಇ-ಮೇಲ್ ಗಳನ್ನು ಪರೀಶೀಲಿಸಿ ಸಂಬಂಧಿಸಿದ ಇಲಾಖೆಗಳಿಗೆ ರವಾನಿಸುವುದು. ತುರ್ತು /ಜರೂರು ಅತಿ ಮುಖ್ಯ ಇ-ಮೇಲ್ ಗಳನ್ನು ಮುಖ್ಯ ಕಾರ್ಯದರ್ಶಿ / ಮುಖ್ಯ; ಕಾರ್ಯದರ್ಶಿಯವರ ವಿಶೇಷಾಧಿಕಾರಿಗಳ ಗಮನಕ್ಕೆ ತಂದು ಅವರ ನಿರ್ದೇಶನದ ಮೇರೆಗೆ ಮುಂದಿನ ಕ್ರಮ ನಿರ್ವಹಣೆ, ಹಿರಿಯ ಅಧಿಕಾರಿಗಳು ಸೂಚಸುವ ಕಾರ್ಯಗಳ ನಿರ್ವಹಣೆ, ಸಾರ್ವಜನಿಕ/GoI ರ ವಿವಿಧ ಇಲಾಖೆಗಳ ದೂರವಾಣಿ ಕರೆಗಳ ನಿರ್ವಹಣೆ, ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಗಳು ಸೂಚಿಸುವ ವಿಷಯಕ್ಕೆ ಪತ್ರ ನಿರ್ವಹಣೆ
8	ಶ್ರೀ ಮಂಜುನಾಥ ಎಂ.ಬಿ ಶಾಖಾಧಿಕಾರಿ	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಮಾನ್ಯ ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು CAT ಜಿಲ್ಲಾ ನ್ಯಾಯಾಲಯಗಳ ಪ್ರಕರಣಗಳ ನಿರ್ವಹಣೆ, ಟಿಪ್ಪಣಿ ರವಾನ & ಹಿಂಬಾಲಿಕ ಕ್ರಮ ಮತ್ತು ಇತರೆ ಕಾರ್ಯಗಳು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು.
9	ಶಾಖಾಧಿಕಾರಿ ಖಾಲಿ ಹುದ್ದೆ	22252442 22033476	ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಐ.ಎ.ಎಸ್, ಐ.ಪಿ.ಎಸ್, ಐ.ಎಫ್.ಎಸ್, ಕೆ.ಎ.ಎಸ್ ಮತ್ತು ಇಲಾಖಾ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಸಂರಕ್ಷಿಸುವ ಹಾಗೂ ಸಮರ್ಪಕವಾಗಿ ನಿರ್ವಹಿಸುವುದು. ಕೇಂದ್ರ ಮಾನವ ಹಕ್ಕುಗಳ ಆಯೋಗ ನ್ಯಾಯಾಲಯ ಪ್ರಕರಣಗಳು ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಸಂಬಂಧಿಸಿದ ಪ್ರಕರಣಗಳು ಮತ್ತು ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು
10	ಶ್ರೀ ಗೌತಮ್ ವಿ ಹಿರಿಯ ಸಹಾಯಕರು	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಕರ್ನಾಟಕ ಉಚ್ಚ ನ್ಯಾಯಾಲಯದ / KAT, NGT, SHRC, NHRC ಅಖಿಲ ಭಾರತೀಯ

			ಸೇವೆ ಅಧಿಕಾರಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳ ನಿರ್ವಹಣೆ, ಕೆಎಎಸ್, ಸಚಿವಾಲಯದ ಅಧಿಕಾರಿಗಳ ಕಾರ್ಯ ನಿರ್ವಹಣಾ ವರದಿಗಳ ಹಾಗೂ ನಿರ್ವಹಣೆ ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು
11	ಶ್ರೀ ಸಿ. ನಾಗರಾಜ್ ಹಿರಿಯ ಸಹಾಯಕರು	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಪತ್ರಗಳು & ಮನವಿಗಳು ಸ್ವೀಕರಿಸುವುದು ಮತ್ತು ಸಂಬಂಧಿಸಿದ ಇಲಾಖೆ/ಶಾಖೆಗಳಿಗೆ ರವಾಸಿಸುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು
12	ಶ್ರೀಮತಿ ಉಷಾ ಎಂ. ಹಿರಿಯ ಶೀಘ್ರಲಿಪಿಗಾರರು	22252442 22033476	ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಲವು ಸಭೆಗಳಿಗೆ ಹಾಜರಾಗಿ ನಡವಳಿ ಸಲ್ಲಿಸುವುದು, ದೂರವಾಣಿ ಕರೆಗಳ ನಿರ್ವಹಣೆ ಕಛೇರಿಯ ಮೇಲಾಧಿಕಾರಿಗಳ ಸೂಚನೆಯಂತೆ ಪತ್ರಗಳನ್ನು ತಯಾರಿಸುವುದು. ಮೇಲಾಧಿಕಾರಿಗಳ ಅಧಿಕೃತ ಪ್ರಯಾಣದ ಭತ್ಯೆಗೆ ಸಂಬಂಧಿಸಿದ ಬಿಲ್ಲುಗಳು ಹಾಗೂ ಇತರೆ ಭತ್ಯೆಗಳ ಬಿಲ್ಲುಗಳನ್ನು ಸಿದ್ಧಪಡಿಸುವುದು ಹಾಗೂ ಮೇಲಾಧಿಕಾರಿಗಳ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು.
13	ಶ್ರೀಮತಿ ನಾಗಶ್ರೀ ಪತ್ರಾಂಕಿತ ಆಪ್ತ ಸಹಾಯಕರು (ಗ್ರೇಡ್ -2)	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ನಲ್ಲಿ ಸ್ವೀಕೃತವಾಗುವ ಇ-ಆಫೀಸ್ ನಲ್ಲಿ ಸ್ವೀಕರಿಸುವ ಕಡತ /ಪತ್ರಗಳನ್ನು ಮುಖ್ಯ ಕಾರ್ಯದರ್ಶಿಯವರ ನಿರ್ದೇಶನದಂತೆ ಕ್ರಮ ವಹಿಸುವುದು. ಪ್ರಮುಖ ಸಭೆಗಳಿಗೆ ಹಾಜರಾಗಿ ನಡವಳಿ ತಯಾರಿಸುವುದು. ಮುಖ್ಯ ಕಾರ್ಯದರ್ಶಿಗಳು ಸೂಚಿಸುವ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು
14	ವಿನೋದ ಟಿ.ಎಂ ಶೀಘ್ರಲಿಪಿಗಾರರು	22252442 22033476	ಕಛೇರಿಯ ಪತ್ರಗಳನ್ನು ಬೆರಳಚ್ಚು ಮಾಡುವುದು. ಅವಶ್ಯವಿರುವ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕ್ರಮ ವಹಿಸುವುದು.
15	ಶೀಘ್ರಲಿಪಿಗಾರರ (ಖಾಲಿ ಹುದ್ದೆ) ಸರ್ಕಾರದ ಅಧೀನ ಕಾರ್ಯದರ್ಶಿ	22252442 22033476	ಕಛೇರಿಯ ಪತ್ರಗಳನ್ನು ಬೆರಳಚ್ಚು ಮಾಡುವುದು. ಅವಶ್ಯವಿರುವ ಮಾಹಿತಿಯನ್ನು ಸಂಬಂಧಪಟ್ಟ

	- 1 ಇವರ ಆಪ್ತ ಶಾಖೆ, ಮುಖ್ಯ ಕಾರ್ಯದರ್ಶಿಯವರ ಕಛೇರಿ		ಇಲಾಖೆಗಳಿಂದ ಪಡೆಯುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು.
16	ಶೀಘ್ರಲಿಪಿಗಾರರ (ಖಾಲಿ ಹುದ್ದೆ) ಸರ್ಕಾರದ ಅಧೀನ ಕಾರ್ಯದರ್ಶಿ - 1 ಇವರ ಆಪ್ತ ಶಾಖೆ, ಮುಖ್ಯ ಕಾರ್ಯದರ್ಶಿಯವರ ಕಛೇರಿ	22252442 22033476	ಕಛೇರಿಯ ಪತ್ರಗಳನ್ನು ಬೆರಳಚ್ಚು ಮಾಡುವುದು. ಅವಶ್ಯವಿರುವ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕಾರ್ಯ ನಿರ್ವಹಿಸುವುದು.
17	ರಘುನಂದನ್ ಎಸ್.ಎ ಸಹಾಯಕರು	22252442 22033476	ವಿವಿಧ ಇಲಾಖೆಗಳೊಂದಿಗೆ ನಡೆಯುವ ಮುಖ್ಯ ಕಾರ್ಯದರ್ಶಿಯವರ ಸಭೆಗಳಿಗೆ ಸಮನ್ವಯಿಸುವುದು. ಗೃಹ ಕಛೇರಿ ಕೆಲಸ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕ್ರಮ ವಹಿಸುವುದು.
18	ಸುಬೋದ್ ಸಹಾಯಕರು	22252442 22033476	ಮಾನ್ಯ ನ್ಯಾಯಾಲಯ, CAT, KAT, ಪ್ರಕರಣಗಳ ಟಿಪ್ಪಣಿ ರವಾನೆ, ಹಿಂಬಾಲಿಕೆ ವೆಬ್ ಸೈಟ್ ನಲ್ಲಿ ಸಭೆ ಪ್ರಕ್ರಿಯೆಯನ್ನು Upload ಮಾಡುವುದು ಹಾಗೂ ಮೇಲಾಧಿಕಾರಿಗಳ ಸೂಚನೆಯನ್ವಯ ಕ್ರಮ ವಹಿಸುವುದು.
19	ಸಹಾಯಕರು (ಖಾಲಿ ಹುದ್ದೆ)	22252442 22033476	ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ಪ್ರಕರಣಗಳ ಮೇಲೆ ಹಾಗೂ NGT, CAT SHRC/NHRC ಪ್ರಕರಣಗಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಸದರಿ ವಿಷಯಗಳ ಬಗ್ಗೆ ಕಡತವನ್ನು ಅಧೀನ ಕಾರ್ಯದರ್ಶಿ-2 ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿವ ಅಧಿಕಾರಿಗೆ ಮಂಡಿಸುವುದು ಹಾಗೂ ಮೇಲಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
20	ಸಹಾಯಕರು (ಖಾಲಿ ಹುದ್ದೆ)	22252442 22033476	ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳು, ಮೇಲ್ಮನವಿ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು/ ಕಡತಗಳ ನಿರ್ವಹಣೆ ಹಾಗೂ ಸದರಿ ವಿಷಯಗಳಿಗೆ ಸಂಬಂಧಿಸಿದ ಕಡತಗಳನ್ನು ಅಧೀನ ಕಾರ್ಯದರ್ಶಿ-1 ಇವರಿಗೆ ಮಂಡಿಸುವುದು ಹಾಗೂ ಮೇಲಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
21	ಕಿರಿಯ ಸಹಾಯಕರು (ಹುದ್ದೆ ಖಾಲಿ ಇರುತ್ತದೆ)	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಯ ಅಧೀನ ಕಾರ್ಯದರ್ಶಿ-1 ಇವರ ಶಾಖೆಗೆ ಸಂಬಂಧಿಸಿದ ಪತ್ರ ಸ್ವೀಕೃತಿ ರವಾನೆ ಮತ್ತು

			ಕಡತಗಳ ನಿರ್ವಹಣೆ ಹಾಗೂ ಮೇಲಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
22	ಕಿರಿಯ ಸಹಾಯಕರು (ಹುದ್ದೆ ಖಾಲಿ ಇರುತ್ತದೆ)	22252442 22033476	ಮುಖ್ಯ ಕಾರ್ಯದರ್ಶಿಯವರ ಕಛೇರಿಯ ಅಧೀನ ಕಾರ್ಯದರ್ಶಿ-2 ಇವರ ಶಾಖೆಗೆ ಸಂಬಂಧಿಸಿದ ಪತ್ರ ಸ್ವೀಕೃತಿ ರವಾನೆ ಮತ್ತು ಕಡತಗಳ ನಿರ್ವಹಣೆ ಹಾಗೂ ಮೇಲಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
23	ಬೆರಳಚ್ಚುಗಾರ/ದತ್ತಾಂಶ ನಮೂದಕರು (ಹುದ್ದೆ ಖಾಲಿ ಇರುತ್ತದೆ)	22252442 22033476	ಮೇಲಧಿಕಾರಿಗಳ ಸೂಚನೆಯಂತೆ ಕಛೇರಿಯ ಬೆರಳಚ್ಚು ಕಾರ್ಯ ಹಾಗೂ ಇತರೆ ಕಾರ್ಯ ನಿರ್ವಹಣೆ.
24	ಶ್ರೀ ಬೋರೆಗೌಡ ವಾಹನ ಚಾಲಕರು (ಅನ್ಯ ಕರ್ತವ್ಯ)	22252442 22033476	ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧಿಕೃತ ವಾಹನಚಾಲಕರು
25	ಶ್ರೀ ಮೋಹನ್ ಬಾಬು ವಾಹನ ಚಾಲಕರು	22252442 22033476	ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಯವರ ವಾಹನಚಾಲಕರು
26	ಶ್ರೀ ರೂಪೇಶ್ ಎಸ್.ಎಲ್ ಅಂಗರಕ್ಷಕರು/ವಾಕಿ (ಅನ್ಯ ಕರ್ತವ್ಯ)	22252442 22033476	ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಂಗರಕ್ಷಣೆ ಹಾಗೂ ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಸಮನ್ವಯಗೊಳಿಸುವುದು.
27	ಶ್ರೀ ಶಿವಕುಮಾರ ಐ.ಎಂ ಅಂಗರಕ್ಷಕರು/ವಾಕಿ (ಅನ್ಯ ಕರ್ತವ್ಯ)	22252442 22033476	ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಂಗರಕ್ಷಣೆ ಹಾಗೂ ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಸಮನ್ವಯಗೊಳಿಸುವುದು.
28	ಶ್ರೀ ಮಂಜು ಎಸ್. ಎಲ್ ಹಿರಿಯ ಕಛೇರಿ ಪರಿಚಾರಕರು	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ.
29	ಶ್ರೀ ಗೋವಿಂದರಾಜು ಹಿರಿಯ ಕಛೇರಿ ಪರಿಚಾರಕರು	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ.
30	ಶ್ರೀ ವಿನೋದ್ ಕುಮಾರ್ ಕೆ. ಕಛೇರಿ ಪರಿಚಾರಕರು	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ

31	ಶ್ರೀ ಮಂಜುನಾಥ ಎಸ್. ಕಛೇರಿ ಪರಿಚಾರಕರು(ಅನ್ಯ ಕರ್ತವ್ಯದ ಮೇಲೆ)	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತ್ಯವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ
32	ಚಂದ್ರಕುಮಾರ್ ಆರ್ ಕಛೇರಿ ಪರಿಚಾರಕು(ಹೊರಗುತ್ತಿಗೆ)	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತ್ಯವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ
33	ರವಿಕುಮಾರ್ ಹೆಚ್.ಜಿ ಕಛೇರಿ ಪರಿಚಾರಕು(ಹೊರಗುತ್ತಿಗೆ)	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತ್ಯವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ
34.	ಅನಿಲ್ ರಾಮಕೃಷ್ಣ ಪೋತದಾರ್ ಕಛೇರಿ ಪರಿಚಾರಕು(ಹೊರಗುತ್ತಿಗೆ)	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತ್ಯವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ
35.	ಗೋವಿಂದ ನಾಯ್ಕ್ ಕಛೇರಿ ಪರಿಚಾರಕು(ಹೊರಗುತ್ತಿಗೆ)	22252442 22033476	ಕಛೇರಿ ಪರಿಚಾರಕರ ಹುದ್ದೆಗೆ ನಿಗದಿ ಪಡಿಸಿದ ಕರ್ತ್ಯವ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳು ಮತ್ತು ಪತ್ರ ರವಾನೆ

***

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಕಛೇರಿ
ಮಾಹಿತಿ ಹಕ್ಕು ಅಧಿನಿಯಮ 2005ರ 4ನೇ ಪ್ರಕರಣದ (1)ನೇ ಉಪ ಪ್ರಕರಣದ ಖಂಡ (ಬಿ)ಯ ಅನುಸಾರವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 331, 3ನೇ ಮಹಡಿ, ವಿಧಾನಸೌಧ, ಬೆಂಗಳೂರು-560001 ಕಛೇರಿಯ ಈ ಕೆಳಕಂಡ ಮಾಹಿತಿಯನ್ನು ಒದಗಿಸಿದೆ.

4 (1)(ಬಿ)(i) ಪ್ರಕಾರ್ಯಗಳು ಮತ್ತು ಕರ್ತವ್ಯಗಳು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಕಛೇರಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಭಾಗವಾಗಿದೆ. ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯು ಭಾರತೀಯ ಆಡಳಿತ ಸೇವೆಯ ಎನ್‌ಕೇಡರ್ ಹುದ್ದೆಯಾಗಿರುತ್ತದೆ (ಕರ್ನಾಟಕ ಕೇಡರ್). ಈ ಹುದ್ದೆಯ ಅಧಿಕಾರ ಮತ್ತು ಕರ್ತವ್ಯಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಕಂಡಿಕೆ 27 ರಲ್ಲಿದ್ದು, ಅದರ ಉದ್ಧೃತ ಭಾಗ ಈ ಕೆಳಕಂಡಂತಿದೆ:-

"27 Additional Chief Secretary will be directly in-charge of the Administrative Reforms Division of the DPAR responsibility as those of Chief Secretary. He will give full attention to the disposal of pending files in the Secretariat as well as in the field of sub-ordinate offices. He will supervise the implementation of the arrears drive, collect information about clearance of arrears and issue such follow up instructions as are considered necessary to ensure that all old cases are disposed off and that matters are attend expeditiously. Additional Chief Secretary will also deal with such items of work as re-entrusted to him by the Government from time to time"

4(1)(ಬಿ)(ii) ಅಧಿಕಾರಿಗಳ/ನೌಕರರ ಅಧಿಕಾರ ಹಾಗೂ ಕರ್ತವ್ಯಗಳು:

ಸಚಿವಾಲಯ ಕೈಪಿಡಿಯಲ್ಲಿ ನಿಗಧಿಪಡಿಸಿರುವಂತೆ ಕಾರ್ಯನಿರ್ವಹಿಸಲಾಗುತ್ತದೆ.

4 (1) (ಬಿ) (iii) ಮೇಲ್ಮನವಿ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

ಸಚಿವಾಲಯ ಕೈಪಿಡಿಯನ್ವಯ ಮತ್ತು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರನ್ವಯ ಕಾರ್ಯನಿರ್ವಹಿಸುವುದು ಹಾಗೂ ಅಪರ ಮುಖ್ಯ ಕಾರ್ಯದರ್ಶಿಯವರ ಆದೇಶದಂತೆ ಕಾರ್ಯನಿರ್ವಹಿಸಲಾಗುವುದು.

4 (1) (ಬಿ) (iv) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಹಾಗೂ ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977 ರನ್ವಯ ಕಾರ್ಯನಿರ್ವಹಿಸುವುದು.

4 (1) (ಬಿ) (v) ಇಲಾಖೆಯಲ್ಲಿನ ನೌಕರರ ಪ್ರಕಾರ್ಯಗಳ ನಿರ್ವಹಣೆಗೆ ನಡೆಸುತ್ತಿರುವ ಇಲಾಖೆಯಲ್ಲಿರುವ / ಇಲಾಖೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.

1. ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ
2. ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977
3. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆಯ ವಿವಿಧ ನಿಯಮಗಳು, ಸುತ್ತೋಲೆ, ಅಧಿಕೃತ ಜ್ಞಾಪನಾ ಹಾಗೂ ಸರ್ಕಾರದ ಕಾರ್ಯಕಾರಿ ಆದೇಶಗಳು

4 (1) (ಬಿ) (vi) ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:

1. ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ
2. ಕರ್ನಾಟಕ ಸರ್ಕಾರ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977

4 (1) (ಬಿ) (vii) ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:

ಸಂಜೆ 3.30 ರಿಂದ 5.30 ರವರೆಗೆ ಸಾರ್ವಜನಿಕರಿಗೆ ಭೇಟಿ ಸಮಯ ನಿಗಧಿಪಡಿಸಿದ್ದು ಹೊರತುಪಡಿಸಿ, ಈ ಶಾಖೆಗೆ ಸಂಬಂಧಿಸಿದಂತೆ ಕಾರ್ಯನೀತಿಯ ರಚನೆ ಇತ್ಯಾದಿಗಳಿಗೆ ವ್ಯವಸ್ಥೆ ಇರುವುದಿಲ್ಲ.

4 (1) (ಬಿ) (ix)ಅಧಿಕಾರಿಗಳ ಮತ್ತು ಆಪ್ತ ಸಿಬ್ಬಂದಿಗಳ ವಿವರ (Directory of Officers and Employees)

ಕ್ರ.ಸಂ	ಶ್ರೀ / ಶ್ರೀಮತಿ	ಹುದ್ದೆ	ದೂರವಾಣಿ ಸಂಖ್ಯೆ
01	ಗೌರವ ಗುಪ್ತ	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	22257982/ 22033400/ 22033181
02	ಎಸ್. ಶಶಿಕಲಾ	ಪತ್ರಾಂಕಿತ ಆಪ್ತ ಸಹಾಯಕಿ	
03	ರಂಗನಾಥ ಆರ್	ಸಹಾಯಕ	
04	ಎಸ್. ಸತೀಶ್	ದತ್ತಾಂಶ ನಮೂದು ಸಹಾಯಕ	
05	ಅಜಯ್ ಕುಮಾರ್ ವಿ	ಜಮೇದರ್	

4 (1) (ಬಿ) (x)ವಿನಿಮಯ / ನಿಬಂಧನೆಗಳಲ್ಲಿ ಉಪಬಂಧಿಸಿದಂತೆ, ಪರಿಹಾರ ಕ್ರಮವನ್ನು ಒಳಗೊಂಡಂತೆ ಅಧಿಕಾರಿಗಳು ನೌಕರರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು:

ಕ್ರ.ಸಂ	ಶ್ರೀ / ಶ್ರೀಮತಿ	ಹುದ್ದೆ	ವೇತನ
01	ಗೌರವ ಗುಪ್ತ	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	2,25,000/-
02	ಎಸ್. ಶಶಿಕಲಾ	ಪತ್ರಾಂಕಿತ ಆಪ್ತ ಸಹಾಯಕಿ	98,798/-
03	ರಂಗನಾಥ ಆರ್	ಸಹಾಯಕ	58300/-
04	ಎಸ್. ಸತೀಶ್	ದತ್ತಾಂಶ ನಮೂದು ಸಹಾಯಕ	61300/-
05	ಅಜಯ್ ಕುಮಾರ್ ವಿ	ಜಮೇದರ್	44131/-

4 (1) (ಬಿ) (xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾಪಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

ಯಾವುದೇ ಯೋಜನೆಗಳು ಅಪರ ಮುಖ್ಯ ಕಾರ್ಯದರ್ಶಿಯವರ ಕಛೇರಿಯವರ ವ್ಯಾಪ್ತಿಗೆ ಬರುವುದಿಲ್ಲ. ಈ ಕಛೇರಿಯು ಕರ್ನಾಟಕ ಸರ್ಕಾರ ಸಚಿವಾಯದ ಒಂದು ಶಾಖೆಯಾಗಿದ್ದು, ಈ ಶಾಖೆಯ ವೆಚ್ಚವನ್ನು ಸಚಿವಾಲಯ ಆಯವ್ಯಯದ ಅಡಿಯಲ್ಲಿ ಭರಿಸಲಾಗುತ್ತದೆ.

4 (1) (ಬಿ) (xiii)ಇಲಾಖೆಯು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರಿ ಪತ್ರಗಳನ್ನು ಪಡೆಯುವ ವಿವರಗಳು:

ಅನ್ವಯಿಸುವುದಿಲ್ಲ.

4 (1) (ಬಿ) (xiv) ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:

ಅನ್ವಯಿಸುವುದಿಲ್ಲ.

4 (1) (ಬಿ) (xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:

ಈ ಶಾಖೆಯಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸಿರುವುದಿಲ್ಲ.

4 (1) (ಬಿ) (xvi)ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು:

ಕ್ರ.ಸಂ	ಶ್ರೀ / ಶ್ರೀಮತಿ	ಮೇಲ್ಮನವಿ ಪ್ರಾಧಿಕಾರ ಶ್ರೀ / ಶ್ರೀಮತಿ
01	ಎಸ್. ಶಶಿಕಲಾ ಪತ್ರಾಂಕಿತ ಆಪ್ತ ಸಹಾಯಕಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ #331, 3ನೇ ಮಹಡಿ, ವಿಧಾನಸೌಧ, ಬೆಂಗಳೂರು-560001.	

XV ನಿಗಧಿಪಡಿಸಲಾದ ಇತರೆ ಯಾವುದೇ ಮಾಹಿತಿಗಳು:

ಅನ್ವಯಿಸುವುದಿಲ್ಲ.

*****

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಸರ್ಕಾರದ ಕಾರ್ಯದರ್ಶಿಯವರ ಕಛೇರಿ

4 (1)(ಬಿ)(i) ಪ್ರಕಾರ್ಯಗಳು ಮತ್ತು ಕರ್ತವ್ಯಗಳು

ಸರ್ಕಾರದ ಕಾರ್ಯದರ್ಶಿ, ಸೀಆಸು ಇಲಾಖೆ ಯವರ ಕಛೇರಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಭಾಗವಾಗಿದೆ. ಕಾರ್ಯದರ್ಶಿ ಹುದ್ದೆಯು ಭಾರತೀಯ ಆಡಳಿತ ಸೇವೆಯ ಎನ್ಕೇಡರ್ ಹುದ್ದೆಯಾಗಿರುತ್ತದೆ. (ಕರ್ನಾಟಕ ಕೇಡರ್). ಈ ಹುದ್ದೆಯ ಅಧಿಕಾರಿ ಮತ್ತು ಕರ್ತವ್ಯಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯದ ಕೈಪಿಡಿ ಕಂಡಿಕೆ 28-31 ರಲ್ಲಿದ್ದು, ಅದರ ಉಧೃತ ಭಾಗ ಈ ಕೆಳಕಂಡಂತಿದೆ:

28. **Principal Secretaries/ Secretaries/ Special Secretaries:** The Principal Secretary/Secretary/Special Secretary is the held of a Secretariat Department. A Department having a Principal Secretary and a Secretary or a Special Secretary subject to the specific orders of the Government to the contrary, shall be the Senior most Officer among the three/two. The Senior most of these officers may call for any of the records and attend to the same.

29. The Principal Secretary/Secretary/Special Secretary in a Department is Secretary to Government and not a Secretary to the Minister in charge of the Department. They shall adhere to the Transaction of Business Rules and Allocation of Business Rules. It is their duty to place all the relevant facts relating to a case and advice to enable the Minister to pass final orders on any case going to the Minister for a decision.

30. It shall also be the duty of the Principal Secretary/Secretary to draw the attention of the Minister to the fact that any proposed course of action suggested in the minutes etc., is contrary to the provision of any Rule or Law or is it variance with the policy hitherto adopted by Government. Wherever any course of action decided by the Minister is contrary to the provisions of any Rule or Law is at variance with the policy hitherto adopted by Government, it shall be the duty of the Secretary to draw attention of the Minister to this fact. He shall resubmit the file/papers to the Minister drawing his attention to this fact. In case, the Minister were to reiterate his orders or pass orders which are not in accordance with Rules/laws/policies, the Principal Secretary/Secretary, shall refer the matter to the Chief Secretary. The final decision about the legality or otherwise of a course of action shall thereafter be taken in consultation with law Department.

31. The Secretary exercises general supervision and control over the staff under him and is responsible for seeing that the members of the staff do the work allotted to them efficiently and expeditiously.

4 (1) (ಬಿ) (ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು:

ಸಚಿವಾಲಯದ ಕೈಪಿಡಿಯಲ್ಲಿ ನಿಗದಿಪಡಿಸಿರುವಂತೆ ಕಾರ್ಯನಿರ್ವಹಿಸಲಾಗುತ್ತಿದೆ.

4(1) (ಬಿ) (iii) ಮೇಲ್ಮನವಿ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

ಸಚಿವಾಲಯ ಕೈಪಿಡಿಯನ್ವಯ ಮತ್ತು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977 ರನ್ವಯ ಕಾರ್ಯನಿರ್ವಹಿಸುವುದು ಹಾಗೂ ಕಾರ್ಯದರ್ಶಿಯವರ ಆದೇಶದಂತೆ ಕಾರ್ಯನಿರ್ವಹಿಸಲಾಗುವುದು.

4 (1) (ಬಿ) (iv) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಹಾಗೂ ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977 ರನ್ವಯ ಕಾರ್ಯನಿರ್ವಹಿಸುವುದು.

4 (1) (ಬಿ) (v) ಇಲಾಖೆಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ನಡೆಸುತ್ತಿರುವ ಇಲಾಖೆಯಲ್ಲಿರುವ/ಇಲಾಖೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಕರ್ನಾಟಕ ಸರ್ಕಾರ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977 , ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆಯ ವಿವಿಧ ನಿಯಮಗಳು, ಸುತ್ತೋಲೆ, ಅಧಿಕೃತ ಜ್ಞಾಪನ ಹಾಗೂ ಸರ್ಕಾರದ ಕಾರ್ಯಕಾರಿ ಆದೇಶಗಳು

4(1) (ಬಿ) (vi) ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:

1) ಸಚಿವಾಲಯ ಕೈಪಿಡಿ
2) ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು, 1977

4 (1) (ಬಿ) (vii) ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತ ಯಾವುದೇ ವ್ಯವಸ್ಥೆಯ ವಿವರಗಳು:

ಸಂಜೆ 3.30 ರಿಂದ 5.30 ರವರೆಗೆ ಸಾರ್ವಜನಿಕರಿಗೆ ಭೇಟಿ ಸಮಯ ನಿಗಧಿಪಡಿಸಿದ್ದು, ಹೊರತುಪಡಿಸಿ ಈ ಶಾಖೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯನೀತಿಯ ರಚನೆ ಇತ್ಯಾದಿಗಳಿಗೆ ವ್ಯವಸ್ಥೆ ಇರುವುದಿಲ್ಲ.

4 (1) (ಬಿ) (ix) ಮತ್ತು (x)ಕ್ಕೆ ಮಾಹಿತಿ ಈ ಕೆಳಗಿನಂತಿವೆ:

ಹೆಸರು ಶ್ರೀ / ಶ್ರೀಮತಿ	31.03.2025 ರನ್ವಯ ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆ	ದೂರವಾಣಿ ಸಂಖ್ಯೆ	ಪಡೆಯುತ್ತಿದ್ದ ವೇತನ ರೂ. ಗಳಲ್ಲಿ
ಡಾ: ಕೆ.ಜಿ. ಜಗದೀಶ, ಭಾ.ಆ.ಸೇ.	ಸರ್ಕಾರದ ಕಾರ್ಯದರ್ಶಿ	22256371 22256371 (ಫ್ಯಾಕ್ಸ್) 22033335	3,23,736-00

		22033230	
ಛಾಯಾ ಹೆಚ್.ಟಿ.	ಆಪ್ತ ಕಾರ್ಯದರ್ಶಿ (ಗ್ರೇಡ್-೨)		1,23,231-00
ರಾಮಾಂಜನಯ್ಯ ಬಿ.ವಿ.	ಶೀಘ್ರಲಿಪಿಗಾರರು		79,615-00
ವಿನಾಯಕ ಬಿಡಕರ	ಸಹಾಯಕರು		71,934-00
ಮೊಹಮ್ಮದ್ ರಫೀವುಲ್ಲಾ	ಕಿರಿಯ ಸಹಾಯಕರು		49,886-00
ಜೈರಾಜ್ ಜೆ.	ಜಮೇದಾರ್		62,301-00
ಸೈಯದ್ ಕರೀಮ್	ಜಮೇದಾರ್		62,301-00

****

ಸರ್ಕಾರದ ಅಪರ ಕಾರ್ಯದರ್ಶಿಯವರ ಕಛೇರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

4(1)(ಬಿ)(i) ಪ್ರಕಾರ್ಯಗಳು ಮತ್ತು ಕರ್ತವ್ಯಗಳು :

ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸು ಇಲಾಖೆಯವರ ಕಛೇರಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಭಾಗವಾಗಿದೆ. ಈ ಹುದ್ದೆಯ ಅಧಿಕಾರ ಮತ್ತು ಕರ್ತವ್ಯಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಕಂಡಿಕೆ-32ರಲ್ಲಿದ್ದು, ಅದರ ಉಧೃತ ಭಾಗ ಈ ಕೆಳಕಂಡಂತಿದೆ :-

32. These are important middle management level officers of the Government in the Secretariat. They will exercise final decision making powers as delegated to them by the Principal Secretary/Secretary from time to time.

This level officers specific inputs in the decision making process are: Examine the case in terms of the priority policy of Government, explain what is sought to be done, decide what facts and figures are needed, obtain and tabulate facts and figures, evaluate alternative courses of action that could be taken, opine on optimal course to be taken giving reasons.

4(1)(ಬಿ)(ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು :

ಸಚಿವಾಲಯ ಕೈಪಿಡಿಯಲ್ಲಿ ನಿಗದಿಪಡಿಸಿರುವಂತೆ ಕಾರ್ಯ ನಿರ್ವಹಿಸಲಾಗುತ್ತಿದೆ.

4(1)(ಬಿ)(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ :

ಸಚಿವಾಲಯ ಕೈಪಿಡಿಯನ್ವಯ ಮತ್ತು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977 ರನ್ವಯ ಕಾರ್ಯ ನಿರ್ವಹಿಸುವುದು ಹಾಗೂ ಕಾರ್ಯದರ್ಶಿಯವರ ಆದೇಶದಂತೆ ಕಾರ್ಯ ನಿರ್ವಹಿಸಲಾಗುವುದು.

4(1)(ಬಿ)(iv) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು :

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಹಾಗೂ ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977 ರನ್ವಯ ಕಾರ್ಯ ನಿರ್ವಹಿಸುವುದು.

4(1)(ಬಿ)(v) ಇಲಾಖೆಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ನಡೆಸುತ್ತಿರುವ ಇಲಾಖೆಯಲ್ಲಿರುವ / ಇಲಾಖೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು

1. ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ.
2. ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977.
   ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆಯ ವಿವಿಧ ನಿಯಮಗಳು, ಸುತ್ತೋಲೆ, ಅಧಿಕೃತ ಜ್ಞಾಪನ ಹಾಗೂ ಸರ್ಕಾರದ ಕಾರ್ಯಕಾರಿ ಆದೇಶಗಳು.

4(1)(ಬಿ)(vi) ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ :

1. ಸಚಿವಾಲಯ ಕೈಪಿಡಿ
2. ಕರ್ನಾಟಕ ಸರ್ಕಾರ ವ್ಯವಹಾರಗಳ ನಿರ್ವಹಣೆ ನಿಯಮಗಳು 1977

4(1)(ಬಿ)(vii) ಇಲಾಖೆಯ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು

ಸಂಜೆ 3.30 ರಿಂದ 5.30 ರವರೆಗೆ ಸಾರ್ವಜನಿಕರಿಗೆ ಭೇಟಿ ಸಮಯ ನಿಗದಿಪಡಿಸಿದ್ದು, ಹೊರತು ಪಡಿಸಿ ಈ ಶಾಖೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯ ನೀತಿಯ ರಚನೆ ಇತ್ಯಾದಿಗಳಿಗೆ ವ್ಯವಸ್ಥೆ ಇರುವುದಿಲ್ಲ.

4(1)(ಬಿ)(viii) ಸಲಹೆಯನ್ನು ಪಡೆಯುವ ಸಂಬಂಧದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳು ಮತ್ತು ಇವುಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವುದೆ :

ಅನ್ವಯಿಸುವುದಿಲ್ಲ.

4(1)(ಬಿ)(ix) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ :

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಶ್ರೀ ಅನಂತ ಎನ್. ಕಾಸ್ಕರ್ **ಸರ್ಕಾರದ ಅಪರ ಕಾರ್ಯದರ್ಶಿ,** ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ದೂರವಾಣಿ ಸಂಖ್ಯೆ : 2203 2541, 22205797 ಇ-ಮೇಲ್ : **splsecy-dpar@karnataka.gov.in**

ಅಪರ ಕಾರ್ಯದರ್ಶಿಯವರ ಆಪ್ತ ಶಾಖೆ
ಶ್ರೀ ಹೆಚ್. ಗೋವಿಂದರಾಜ, ಆಪ್ತ ಕಾರ್ಯದರ್ಶಿ (ಗ್ರೇಡ್-2)
ಖಾಲಿ ಹುದ್ದೆ, ಕಿರಿಯ ಸಹಾಯಕ
ಶ್ರೀ ರಮೇಶ್ ಟಿ, ವಾಹನ ಚಾಲಕ
ಖಾಲಿ ಹುದ್ದೆ, ದಲಾಯತ್

4(1)(ಬಿ)(x) ವಿನಿಮಯ / ನಿಬಂಧನೆಗಳಲ್ಲಿ ಉಪಬಂಧಿಸಿದಂತೆ, ಪರಿಹಾರ ಕ್ರಮವನ್ನು ಒಳಗೊಂಡಂತೆ

4(1)(ಬಿ)(ix) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ (Directory)

ಕ್ರ. ಸಂ	ಅಧಿಕಾರಿ / ನೌಕರರ ಹೆಸರು	ವೇತನ
1.	ಶ್ರೀ ಅನಂತ ಎನ್. ಕಾಸ್ಕರ್ ಅಪರ ಕಾರ್ಯದರ್ಶಿ	ರೂ. 2,25,366/-
2.	ಶ್ರೀ ಹೆಚ್. ಗೋವಿಂದರಾಜ ಆಪ್ತ ಕಾರ್ಯದರ್ಶಿ (ಗ್ರೇಡ್-2)	ರೂ. 1,25,281/-
3.	ಖಾಲಿ ಹುದ್ದೆ ಕಿರಿಯ ಸಹಾಯಕ	-
4.	ಶ್ರೀ ರಮೇಶ್ ಟಿ, ವಾಹನ ಚಾಲಕ	55,353/-
5.	ಖಾಲಿ ಹುದ್ದೆ ದಲಾಯತ್	-

4(1)(ಬಿ)(xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ; ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ :

ಯಾವುದೇ ಯೋಜನೆಗಳು ಅಪರ ಕಾರ್ಯದರ್ಶಿಯವರ ಕಛೇರಿ ವ್ಯಾಪ್ತಿಗೆ ಬರುವುದಿಲ್ಲ. ಈ ಕಛೇರಿಯು ಕರ್ನಾಟಕ ಸರ್ಕಾರ ಸಚಿವಾಲಯದ ಒಂದು ಶಾಖೆಯಾಗಿದ್ದು, ಈ ಶಾಖೆಯ ವೆಚ್ಚವನ್ನು ಸಚಿವಾಲಯದ ಆಯವ್ಯಯದ ಅಡಿಯಲ್ಲಿ ಭರಿಸಲಾಗುತ್ತದೆ.

4(1)(ಬಿ)(xii) ಹಂಚಿಕೆ ಮಾಡಲಾದ ಮೊಬಲಗುಗಳನ್ನೊಳಗೊಂಡು, ಸಹಾಯ ಧನ ಕಾರ್ಯಕ್ರಮಗಳನ್ನು ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ :

ಅನ್ವಯಿಸುವುದಿಲ್ಲ.

4(1)(ಬಿ)(xiii) ಇಲಾಖೆಯು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಿ ಪತ್ರಗಳನ್ನು, ಪಡೆಯುವವರ ವಿವರಗಳು :

ಅನ್ವಯಿಸುವುದಿಲ್ಲ.

4(1)(ಬಿ)(xiv) ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿ ವಿವರ :

ಅನ್ವಯಿಸುವುದಿಲ್ಲ.

4(1)(ಬಿ)(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:

ಈ ಶಾಖೆಯಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸಿರುವುದಿಲ್ಲ.

4(1)(ಬಿ)(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳು :

ಈ ಶಾಖೆಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಇರುವುದಿಲ್ಲ.

4(1)(ಬಿ)(xvii) ನಿಗದಿಪಡಿಸಲಾದ ಇತರೆ ಯಾವುದೇ ಮಾಹಿತಿಗಳು :

ಅನ್ವಯಿಸುವುದಿಲ್ಲ.

*****

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ / ಸಿಬ್ಬಂದಿ)

4(1)(ಬಿ)(i) ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:-

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆಡಳಿತ ವಿಭಾಗದ ಅಧೀನದ ಎಲ್ಲಾ ಶಾಖೆಗಳ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

(ಅ) ಸಿಬ್ಬಂದಿ-1 ಶಾಖೆ:

1) ಶಾಖಾಧಿಕಾರಿ ಹುದ್ದೆಗಳ ನೇರ ನೇಮಕಾತಿ, ಕನ್ನಡ ಹಿರಿಯ ಭಾಷಾಂತರಕಾರರ ಹುದ್ದೆಯನ್ನು ಆಯ್ಕೆ ಮೂಲಕ ನೇಮಕಾತಿ ಮಾಡುವುದು.
2) ಹಿರಿಯ ಸಹಾಯಕ ವೃಂದದಿಂದ ಶಾಖಾಧಿಕಾರಿ ಹುದ್ದೆಗೆ ಬಡ್ತಿ ಹಾಗೂ ಪ್ರಾರೂಪಣಾ ಸಹಾಯಕ ವೃಂದದಿಂದ ಪ್ರಾರೂಪಣಾ ಶಾಖಾಧಿಕಾರಿ ವೃಂದಕ್ಕೆ ಬಡ್ತಿ, ಹಿರಿಯ ಭಾಷಾಂತರಕಾರ ವೃಂದದಿಂದ ಸಂಶೋಧನಾಧಿಕಾರಿ ಹುದ್ದೆಗೆ ಬಡ್ತಿ ಹಾಗೂ ಸಹಾಯಕ

ಗ್ರಂಥಪಾಲಕ ವೃಂದದಿಂದ ಉಪ ಗ್ರಂಥಾಧಿಕಾರಿ ಹುದ್ದೆಗೆ ಬಡ್ತಿ, ಪೂರ್ವಾನ್ವಯವಾಗಿ ಬಡ್ತಿ ಮತ್ತು ಬಡ್ತಿ ಹೊಂದಿದ ಹುದ್ದೆಯಲ್ಲಿ ವೇತನ ನಿಗದಿ.

3) ವರ್ಗಾವಣೆ, ನಿಯೋಜನೆ, ಬಿಡುಗಡೆ, ಹುದ್ದೆಗಳ ಸೃಜನೆ ಮತ್ತು ಮುಂದುವರೆಸುವುದು; ನಿಯೋಜನೆ ಮೇಲೆ ಕಾರ್ಯನಿರ್ವಹಿಸುವವರ ಅಂತಿಮ ವೇತನ ಪ್ರಮಾಣ ಪತ್ರವನ್ನು ಒದಗಿಸುವಂತೆ ಕೋರುವುದು ಹಾಗೂ ಕಳುಹಿಸುವುದು.
4) ಆರ್ಥಿಕ ಇಲಾಖೆಯ ಅಧೀನಕ್ಕೊಳಪಡುವ ಕ್ಷೇತ್ರ ಇಲಾಖೆಗಳಲ್ಲಿನ ಪ್ರಸ್ತಾವನೆಗಳ ಪರಿಶೀಲನೆ.
5) ಶಾಖಾಧಿಕಾರಿಗಳಿಗೆ ಸಂಬಂಧಿಸಿದ ನ್ಯಾಯಾಂಗ ಮೊಕದ್ದಮೆಗಳು; ವಿಧಾನ ಸಭೆ/ಪರಿಷತ್ ಪ್ರಶ್ನೆಗಳು; ವಿವಿಧ ಆಯೋಗ / ಸಮಿತಿಗಳು ಕೋರುವ ಮಾಹಿತಿ ನೀಡುವುದು.
6) ಬಹುಪ್ರತಿ ಶಾಖೆಯ ನಿರ್ವಹಣೆ.
7) ವಾರ್ಷಿಕ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ, ವೈಯಕ್ತಿಕ ವೇತನ, ರಜೆ ಮಂಜೂರಾತಿ, ಗಳಿಕೆ ರಜೆ ನಗದೀಕರಣ, ಹಬ್ಬದ ಮುಂಗಡ, ವೈದ್ಯಕೀಯ ವೆಚ್ಚ ಮರುಪಾವತಿ, ಸ್ವಗ್ರಾಮ ಪ್ರಯಾಣ ರಿಯಾಯಿತಿ ಮತ್ತು ರಜಾ ಪ್ರಯಾಣ ರಿಯಾಯಿತಿ ಮಂಜೂರಾತಿ ವಿಷಯಗಳು.
8) ಕಾಲಬದ್ಧ ವೇತನ ಬಡ್ತಿ, ವೇತನ ಎತ್ತರಿಕೆ, ವಿವಿಧ ಉದ್ದೇಶಕ್ಕೆ ಅನುಮತಿ ಪತ್ರ / ನಿರಾಕ್ಷೇಪಣಾ ಪತ್ರಗಳು, ಸೇವಾ ಪ್ರಮಾಣ ಪತ್ರಗಳು / ಮನೆ ಕಟ್ಟುವ / ಖರೀದಿ / ರಿಪೇರಿ ಮುಂಗಡ, ವಾಹನ ಖರೀದಿ ಮುಂಗಡ, ಸಾಲಮುಕ್ತ ಪತ್ರಗಳ ನೀಡುವಿಕೆ. ಸಾಮಾನ್ಯ ಭವಿಷ್ಯ ನಿಧಿಗೆ ಸಂಬಂಧಿಸಿದ ಮುಂಗಡ, ಭಾಗಶಃ ಹಿಂಪಡೆಯುವಿಕೆ, ನಿವೃತ್ತಿ ಸೌಲಭ್ಯಗಳ ಮಂಜೂರಾತಿ ವಿಷಯಗಳು, ಇತ್ಯಾದಿ.
9) ಸೇವಾ ಪುಸ್ತಕಗಳ ನಿರ್ವಹಣೆ ಮತ್ತು ಸೇವಾ ವಿಷಯ ದಾಖಲೆ, ವಿಮಾ ಪ್ರಸ್ತಾವನೆ, ಹೆಚ್.ಆರ್.ಎಂ.ಎಸ್. ನಮೂದುಗಳು.
10) ಮಾಹಿತಿ ಹಕ್ಕು ಅಧಿನಿಯಮ, 2005ರಡಿ ಕೋರಿರುವ ಮಾಹಿತಿ ನೀಡುವ ಬಗ್ಗೆ.

(ಆ) <u>ಬಹುಪ್ರತಿಶಾಖೆ (ಸಿಬ್ಬಂದಿ-1 ಶಾಖೆಯಡಿ)</u>

ಬೈಂಡಿಂಗ್ ಕೆಲಸವನ್ನು ನಿರ್ವಹಿಸುವುದು.

(ಇ) <u>ಸಿಬ್ಬಂದಿ-2 ಶಾಖೆ:</u>

1) ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್-ಬಿ ಮತ್ತು ಗ್ರೂಪ್-ಸಿ ವೃಂದದ ಅಧಿಕಾರಿ / ನೌಕರರುಗಳ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆಗಳ ಹಾಗೂ ಕಾರ್ಯನಿರ್ವಹಣಾ ವರದಿಗಳ ಸಂಗ್ರಹ, ಸಂಕಲನ ಮತ್ತು ಪರಿಶೀಲನೆ.
2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆಡಳಿತ / ಸಿಬ್ಬಂದಿ / ಲೆಕ್ಕಪತ್ರ / ಆಡಳಿತ ಕೋಶ ವಿಭಾಗಗಳ ಸಮನ್ವಯ ಕಾರ್ಯಗಳ ನಿರ್ವಹಣೆ.
3) ವಿಧಾನ ಸಭೆ ಮತ್ತು ವಿಧಾನ ಪರಿಷತ್ ಪ್ರಶ್ನೆಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.

(ಈ) <u>ಆಡಳಿತ-ಎ ಶಾಖೆ:</u>

1) ಸಹಾಯಕ ಹಾಗೂ ಸಮಾನ ವೃಂದದ ಹುದ್ದೆಗಳ ಸೃಜನೆ, ಮುಂದುವರಿಕೆ ಹಾಗೂ ಸಹಾಯಕ ಹುದ್ದೆಗೆ ಮುಂಬಡ್ತಿ ಕುರಿತ ವಿಷಯಗಳು.
2) ಸಾಂಖ್ಯಿಕ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು; ಇತ್ಯಾದಿ ಸೃಜಿಸಲಾದ ಹುದ್ದೆಗಳಿಗೆ ನೌಕರರನ್ನು ಮರು ಸ್ಥಳನಿಯುಕ್ತಿಗೊಳಿಸುವ ಮತ್ತು ಬಿಡುಗಡೆ ಮಾಡುವ ಬಗ್ಗೆ.

3) ಕರ್ನಾಟಕ ಸರ್ಕಾರ ಸಚಿವಾಲಯದ ಔಷಧಾಲಯದ ಗ್ರೂಪ್-ಸಿ ಮತ್ತು ಡಿ ನೌಕರರ ರಜೆ ಮಂಜೂರಾತಿ, ಗಳಿಕೆ ರಜೆ ನಗದೀಕರಣ, ನಿವೃತ್ತಿ ವೇತನ, ಡಿಸಿಆರ್‌ಜಿ ಮತ್ತು ನಿವೃತ್ತಿ ನಂತರದ, ಮರಣ ನಂತರದ ಇನ್ನಿತರ ಸವಲತ್ತುಗಳ ಇತ್ಯರ್ಥಪಡಿಸುವಿಕೆ / ವಾರ್ಷಿಕ ವೇತನ ಬಡ್ತಿ / ಕಾಲಬದ್ಧ ವೇತನ ಮುಂಬಡ್ತಿ / ವಿಶೇಷ ವೇತನ / ಸ್ವಗಿತ ವೇತನ ಬಡ್ತಿ ಹಾಗೂ ವೇತನ ನಿಗಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಹಾಗೂ ವಿಮಾ ಪ್ರಸ್ತಾವನೆ.

4) ಸಹಾಯಕ ವೃಂದದ ನೇರ ನೇಮಕಾತಿ / ಅನುಕಂಪದ ನೇಮಕಾತಿ / ವರ್ಗಾವಣೆ / ನಿಯೋಜನೆ / ಬಿಡುಗಡೆ / ವಿವಿಧ ಕಾರಣಗಳಿಂದಾಗಿ ಸಹಾಯಕ ಹಾಗೂ ಸಹಾಯಕ ಗ್ರಂಥಪಾಲಕರಿಗೆ ನೀಡುವ ಪರವಾನಗಿ / ನಿರಾಕ್ಷೇಪಣಾ ಪತ್ರ / ಅನುಮತಿ ಪತ್ರಗಳು / ಇತ್ಯಾದಿ.

5) ಸಚಿವಾಲಯದ ಎಲ್ಲಾ ಸಹಾಯಕ ಹಾಗೂ ಸಮಾನ ವೃಂದದ ನೌಕರರಿಗೆ ಹಬ್ಬದ ಮುಂಗಡಗಳ ಮಂಜೂರಾತಿ / ಸಾಮಾನ್ಯ ಭವಿಷ್ಯ ನಿಧಿ ಮುಂಗಡ ಮಂಜೂರಾತಿ / ಪ್ರಭಾರ ಭತ್ಯೆ ಮಂಜೂರಾತಿ / ಇತ್ಯಾದಿ.

6) ರಜೆ ಮಂಜೂರಾತಿ, ಗಳಿಕೆ ರಜೆ ನಗದೀಕರಣ, ರಜಾ ಪ್ರಯಾಣ ಸವಲತ್ತು, ಸ್ವಗ್ರಾಮ ಪ್ರಯಾಣ ರಿಯಾಯಿತಿ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಯ ವಿಷಯಗಳು ಹಾಗೂ ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳು ಹಾಗೂ ಮಾಹಿತಿ ಹಕ್ಕು ವಿಷಯಗಳು; ಮನೆ ಕಟ್ಟುವ ಮುಂಗಡ, ಮನೆ ಖರೀದಿ ಮುಂಗಡ, ಮನೆ ರಿಪೇರಿ ಮುಂಗಡ, ವಾಹನ ಖರೀದಿ ಮುಂಗಡ, ಇತ್ಯಾದಿ.

7) ನಿವೃತ್ತಿ ವೇತನ, ಡಿ.ಸಿ.ಆರ್.ಜಿ. ಮತ್ತು ನಿವೃತ್ತಿ ನಂತರದ / ಮರಣಾ ನಂತರದ ಇನ್ನಿತರ ಸವಲತ್ತುಗಳ ಇತ್ಯರ್ಥಪಡಿಸುವಿಕೆ / ವಾರ್ಷಿಕ ವೇತನ ಬಡ್ತಿ / ಕಾಲಬದ್ಧ ವೇತನ ಬಡ್ತಿ / ವಿಶೇಷ ವೇತನ / ಸ್ವಗಿತ ವೇತನ ಬಡ್ತಿ ಹಾಗೂ ವೇತನ ನಿಗಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಹಾಗೂ ವಿಮಾ ಪ್ರಸ್ತಾವನೆ – ಈ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ಎಲ್ಲಾ ನ್ಯಾಯಾಲಯ ಪ್ರಕರಣಗಳು, ಇತ್ಯಾದಿ.

8) ರಜಾ ಪ್ರಯಾಣ ಸವಲತ್ತು, ಸ್ವಗ್ರಾಮ ಪ್ರಯಾಣ ರಿಯಾಯಿತಿ ಸೌಲಭ್ಯ.

9) ಸೇವಾ ಪುಸ್ತಕದಲ್ಲಿ ಸಹಾಯಕ ಹಾಗೂ ತತ್ಸಮಾನ ವೃಂದದ ನೌಕರರ ಸೇವಾ ವಿಷಯಗಳ ಬಗ್ಗೆ ದಾಖಲೆ ನಿರ್ವಹಣೆ ಹಾಗೂ ಸದರಿ ನೌಕರರ ಸೇವಾ ವಿಷಯಗಳನ್ನು ಇ-ಸೇವಾ ದಾಖಲೆಯಲ್ಲಿ ನಮೂದಿಸುವುದು.

10) ಶಾಖೆಯ ಎಲ್ಲಾ ಚಲನವಲನ ಪಟ್ಟಿಯಲ್ಲಿ ದಾಖಲೆ ಹಾಗೂ ಸಚಿವಾಲಯ ಕೈಪಿಡಿಯಲ್ಲಿ ಶಾಖೆಯ ಕಿರಿಯ ಸಹಾಯಕರಿಗೆ / ಸಹಾಯಕರಿಗೆ / ಹಿರಿಯ ಸಹಾಯಕರಿಗೆ ನಿಗದಿಪಡಿಸಿದ ಎಲ್ಲಾ ಕೆಲಸಗಳು.

11) ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಸಿಕ, ತ್ರೈಮಾಸಿಕ, ಅರ್ಧ ವಾರ್ಷಿಕ ವರದಿಗಳ ಸಲ್ಲಿಸುವಿಕೆ.

(ಊ) <u>ಆಡಳಿತ-ಬಿ ಶಾಖೆ</u>:

1) ಹಿರಿಯ ಸಹಾಯಕ, ಹಿರಿಯ ಸಹಾಯಕ ಗ್ರಂಥಪಾಲಕ, ಪ್ಯಾರೂಪಣಾ ಸಹಾಯಕ, ಇವರಿಗೆ ವಿವಿಧ ಕಾರಣಗಳಿಗಾಗಿ ನೀಡುವ ಪರವಾನಗಿ / ಅನುಮತಿ ಪತ್ರ / ನಿರಾಕ್ಷೇಪಣಾ ಪತ್ರಗಳು; ಹಿರಿಯ ಸಹಾಯಕರಿಗೆ ಸಂಬಂಧಪಟ್ಟ ಎಲ್ಲಾ ಸೇವಾ ವಿಷಯಗಳು ಅಂದರೆ ಮುಂಬಡ್ತಿ, ವರ್ಗಾವಣೆ, ನಿಯೋಜನೆ, ವಿವಿಧ ಕಾರಣಗಳಿಂದಾಗಿ ಪರವಾನಗಿ, ಇತ್ಯಾದಿ ಹಾಗೂ ಈ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ಎಲ್ಲಾ ನ್ಯಾಯಾಲಯ ಪ್ರಕರಣಗಳು ಹಾಗೂ ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳು ಹಾಗೂ ಮಾಹಿತಿ ಹಕ್ಕು ವಿಷಯಗಳು.

2) ಸಚಿವಾಲಯದ ಎಲ್ಲಾ ಹಿರಿಯ ಸಹಾಯಕ ಹಾಗೂ ಸಮಾನ ವೃಂದದ ನೌಕರರಿಗೆ ಮನೆ ಕಟ್ಟುವ ಮುಂಗಡ, ಮನೆ ಖರೀದಿ ಮುಂಗಡ, ಮನೆ ರಿಪೇರಿ ಮುಂಗಡ, ಸಾಮಾನ್ಯ ಭವಿಷ್ಯ ನಿಧಿ ಮುಂಗಡ, ವಾಹನ ಖರೀದಿ ಮುಂಗಡ, ಹಬ್ಬಗಳ ಮುಂಗಡ ಹಣ ಮಂಜೂರಾತಿ.

3) ವೈದ್ಯಕೀಯ ವೆಚ್ಚ ಮರುಪಾವತಿ, ಪ್ರಭಾರ ಭತ್ಯೆ ಮಂಜೂರಾತಿ, ಇತ್ಯಾದಿ.

4) ಸಹಾಯಕ ಸಾಂಖ್ಯಿಕ ಅಧಿಕಾರಿ, ಲೆಕ್ಕಾಧೀಕ್ಷಕರು, ಇತ್ಯಾದಿ ಸೃಜಿಸಲಾದ ಹುದ್ದೆಗಳಿಗೆ ನೌಕರರನ್ನು ನಿಯೋಜಿಸುವ ಮತ್ತು ಬಿಡುಗಡೆ ಮಾಡುವ ಬಗ್ಗೆ ಹಾಗೂ ಈ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ಎಲ್ಲಾ ನ್ಯಾಯಾಲಯ ಪ್ರಕರಣಗಳು ಹಾಗೂ ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳು.

5) ಹಿರಿಯ ಸಹಾಯಕ ಹಾಗೂ ಸಮಾನ ವೃಂದದ ಹುದ್ದೆಗಳ ಸೃಜನೆ / ಮುಂದುವರಿಕೆ / ನಿವೃತ್ತಿ ವೇತನ ಇತ್ಯಾದಿಗಳ ಬಗ್ಗೆ ಕ್ರಮ.
6) ಸ್ವಗಿತ ವೇತನ ಬಡ್ತಿಗೆ ಮಂಜೂರಾತಿ, ಹಿರಿಯ ಸಹಾಯಕ ಮತ್ತು ಸಮಾನ ವೃಂದದ ನೌಕರರಿಗೆ ವೇತನ ನಿಗದಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
7) ಹಿರಿಯ ಸಹಾಯಕ ಹಾಗೂ ಸಮಾನ ವೃಂದದ ನೌಕರರ ಎಲ್ಲಾ ರಜೆಗಳ ಮಂಜೂರಾತಿ, ಸಮಾನ ವೃಂದದ ನೌಕರರ ರಜಾ ಪ್ರಯಾಣ ಸವಲತ್ತು, ಸ್ವಗ್ರಾಮ ಪ್ರಯಾಣ ರಿಯಾಯಿತಿ.
8) ಮುಖ್ಯ ಮಂತ್ರಿಗಳ / ಮಂತ್ರಿಗಳ ಆಪ್ತ ಸಿಬ್ಬಂದಿ ಶಾಖೆಗಳಿಗೆ ನೌಕರರ ತೈನಾತಿ, ವರ್ಗಾವಣೆ, ಇತ್ಯಾದಿ ಹಾಗೂ ಈ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ಎಲ್ಲಾ ನ್ಯಾಯಾಲಯ ಪ್ರಕರಣಗಳು ಹಾಗೂ ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳು.
9) ಸೇವಾ ಪುಸ್ತಕದಲ್ಲಿ ಹಿರಿಯ ಸಹಾಯಕ ಹಾಗೂ ತತ್ಸಮಾನ ವೃಂದದ ನೌಕರರ ಸೇವಾ ವಿಷಯಗಳ ಬಗ್ಗೆ ದಾಖಲೆ ನಿರ್ವಹಣೆ ಹಾಗೂ ಸದರಿ ನೌಕರರ ಸೇವಾ ವಿಷಯಗಳನ್ನು ಇ-ಸೇವಾ ದಾಖಲೆಯಲ್ಲಿ ನಮೂದಿಸುವುದು.
10) ಹಿರಿಯ ಸಹಾಯಕ ಹಾಗೂ ತತ್ಸಮಾನ ವೃಂದದ ನೌಕರರ ವಾರ್ಷಿಕ ವೇತನ ಬಡ್ತಿ, ಕಾಲಬದ್ಧ ಮುಂಬಡ್ತಿ, ವಿಶೇಷ ವೇತನ ಹಾಗೂ ವಿಮಾ ಪ್ರಸ್ತಾವನೆ, ಇಲಾಖಾ ಪರೀಕ್ಷೆಗಳ ಅರ್ಜಿ ಕಳುಹಿಸುವಿಕೆ, ಸಾಲ ಮುಕ್ತಪತ್ರಗಳ ನೀಡುವಿಕೆ, ಇತ್ಯಾದಿ.
11) ಶಾಖೆಯ ಎಲ್ಲಾ ಚಲನವಲನ ಪಟ್ಟಿಯಲ್ಲಿ ದಾಖಲೆ ಹಾಗೂ ಸಚಿವಾಲಯ ಕೈಪಿಡಿಯಲ್ಲಿ ಶಾಖೆಯ ಕಿರಿಯ ಸಹಾಕರಿಗೆ / ಸಹಾಯಕರಿಗೆ / ಹಿರಿಯ ಸಹಾಯಕರಿಗೆ ನಿಗದಿಪಡಿಸಿದ ಎಲ್ಲಾ ಕೆಲಸಗಳು.
12) ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಸಿಕ, ತ್ರೈಮಾಸಿಕ, ಅರ್ಧ ವಾರ್ಷಿಕ ವರದಿಗಳ ಸಲ್ಲಿಸುವಿಕೆ.

(ಊ) <u>ಆಡಳಿತ-ಸಿ- ಶಾಖೆ:</u>

1) ಶೀಘ್ರಲಿಪಿಗಾರರ ಹುದ್ದೆಗಳ ನೇರ ನೇಮಕಾತಿ.
2) ಶೀಘ್ರಲಿಪಿಗಾರರು, ಹಿರಿಯ ಶೀಘ್ರಲಿಪಿಗಾರರು ಮತ್ತು ಪತ್ರಾಂಕಿತ ಆಪ್ತ ಸಹಾಯಕರ ಹುದ್ದೆಗೆ ಬಡ್ತಿ, ವರ್ಗಾವಣೆ ಮತ್ತು ನಿಯೋಜನೆ.
3) ವಾರ್ಷಿಕ ವೇತನ ಬಡ್ತಿ, ರಜೆ ಮಂಜೂರಾತಿ, ವೈಯಕ್ತಿಕ ವೇತನ, ಪ್ರಸೂತಿ ರಜೆ ಮಂಜೂರಾತಿ, ಪ್ರಭಾರ ಭತ್ಯೆ ಮಂಜೂರಾತಿ, ಗಳಿಕೆ ರಜೆ ನಗದೀಕರಣ, ಮುಂಗಡಗಳು, ಕಾಲಬದ್ಧ ವೇತನ ಬಡ್ತಿ, ಸ್ವಗಿತ ವೇತನ ಬಡ್ತಿ, ಸ್ವಯಂಚಾಲಿತ ವಿಶೇಷ ವೇತನ ಬಡ್ತಿ, ವೈದ್ಯಕೀಯ ವೆಚ್ಚ ಮರುಪಾವತಿ, ಸ್ವಗ್ರಾಮ ಪ್ರಯಾಣ ರಿಯಾಯಿತಿ ಮತ್ತು ರಜಾ ಪ್ರಯಾಣ ರಿಯಾಯಿತಿ ಮಂಜೂರಾತಿ ವಿಷಯಗಳು.
4) ಸಾಮಾನ್ಯ ಭವಿಷ್ಯ ನಿಧಿ, ನಿವೃತ್ತಿ ವೇತನ, ಡಿಸಿಆರ್‌ಜಿ ಮತ್ತು ಸೇವಾಂತ್ಯದ ಇನ್ನಿತರ ಸವಲತ್ತುಗಳು ಇತ್ಯರ್ಥಪಡಿಸುವುದು.
5) ಶೀಘ್ರಲಿಪಿಗಾರರು / ಹಿರಿಯ ಶೀಘ್ರಲಿಪಿಗಾರರು ಮತ್ತು ಪತ್ರಾಂಕಿತ ಆಪ್ತ ಸಹಾಯಕ ಹುದ್ದೆಗಳಿಗೆ ಸಂಬಂಧಿಸಿದ ನ್ಯಾಯಾಂಗ ಮೊಕದ್ದಮೆಗಳು.
6) ಕರ್ನಾಟಕ ವಿಧಾನ ಮಂಡಲದ ಅಧಿವೇಶನ ಸಮಯದಲ್ಲಿ ಕರ್ನಾಟಕ ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳಿಗೆ ಉತ್ತರ.
7) ಶೀಘ್ರಲಿಪಿಗಾರರು / ಹಿರಿಯ ಶೀಘ್ರಲಿಪಿಗಾರರು ಮತ್ತು ಪತ್ರಾಂಕಿತ ಆಪ್ತ ಸಹಾಯಕರ ಸೇವಾ ಪುಸ್ತಕಗಳ ನಿರ್ವಹಣೆ.

(ಋ) <u>ಆಡಳಿತ-ಡಿ- ಶಾಖೆ:</u>

1) ದತ್ತಾಂಶ ನಮೂದು ಸಹಾಯಕ, ಕಿರಿಯ ಸಹಾಯಕ ಮತ್ತು ಗ್ರಂಥಾಲಯ ಸಹಾಯಕ ಹುದ್ದೆಗಳ ನೇಮಕಾತಿ.
2) ಕಿರಿಯ ಸಹಾಯಕ, ದತ್ತಾಂಶ ನಮೂದು ಸಹಾಯಕರು, ಹಿರಿಯ ದತ್ತಾಂಶ ನಮೂದು ಸಹಾಯಕ ಮತ್ತು ಬೈಂಡರ್ ಹುದ್ದೆಗಳಿಗೆ ಬಡ್ತಿ, ವರ್ಗಾವಣೆ ಮತ್ತು ನಿಯೋಜನೆ.

3) ವಾರ್ಷಿಕ ವೇತನ ಬಡ್ತಿ, ರಜೆ ಮಂಜೂರಾತಿ, ವೈಯಕ್ತಿಕ ವೇತನ, ಗಳಿಕೆ ರಜೆ ನಗದೀಕರಣ, ಮುಂಗಡಗಳು, ಕಾಲಬದ್ಧ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ, ವೈದ್ಯಕೀಯ ವೆಚ್ಚ ಮರುಪಾವತಿ, ಸ್ವಗ್ರಾಮ ಪ್ರಯಾಣ ರಿಯಾಯಿತಿ ಮತ್ತು ರಜಾ ಪ್ರಯಾಣ ರಿಯಾಯಿತಿ ಮಂಜೂರಾತಿ ವಿಷಯಗಳು.
4) ಸಾಮಾನ್ಯ ಭವಿಷ್ಯ ನಿಧಿ, ನಿವೃತ್ತಿ ವೇತನ, ಡಿ.ಸಿ.ಆರ್.ಜಿ. ಮತ್ತು ಸೇವಾಂತ್ಯದ ಇನ್ನಿತರ ಸವಲತ್ತುಗಳ ಇತ್ಯರ್ಥಪಡಿಸುವುದು.
5) ದತ್ತಾಂಶ ನಮೂದು ಸಹಾಯಕ, ಹಿರಿಯ ದತ್ತಾಂಶ ನಮೂದು ಸಹಾಯಕ, ಕಿರಿಯ ಸಹಾಯಕ, ಗ್ರಂಥಾಲಯ ಸಹಾಯಕ, ದೂರವಾಣಿ ಪ್ರಚಾಲಕ ಮತ್ತು ಬೈಂಡರ್‌ಗಳ ಹುದ್ದೆಗಳಿಗೆ ಸಂಬಂಧಿಸಿದ ನ್ಯಾಯಾಂಗ ಮೊಕದ್ದಮೆಗಳು.
6) ದತ್ತಾಂಶ ನಮೂದು ಸಹಾಯಕ, ಹಿರಿಯ ದತ್ತಾಂಶ ನಮೂದು ಸಹಾಯಕ, ಕಿರಿಯ ಸಹಾಯಕ, ಗ್ರಂಥಾಲಯ ಸಹಾಯಕ, ದೂರವಾಣಿ ಪ್ರಚಾಲಕ ಮತ್ತು ಬೈಂಡರ್‌ಗಳ ಸೇವಾ ಪುಸ್ತಕಗಳ ನಿರ್ವಹಣೆ.

(ಎ) <u>ಆಡಳಿತ-ಇ ಶಾಖೆ:</u>

1) ಕರ್ನಾಟಕ ಸರ್ಕಾರ ಸಚಿವಾಲಯದ ವಾಹನ ಚಾಲಕ ಹಾಗೂ ಡಿ-ವೃಂದದ ನೌಕರರ ನೇರ ನೇಮಕಾತಿ / ಅನುಕಂಪದ ಆಧಾರದ ಮೇಲೆ ನೇಮಕಾತಿ, ಬಡ್ತಿ, ವರ್ಗಾವಣೆ, ನಿಯೋಜನೆ, ಹುದ್ದೆಗಳ ಸೃಜನೆ, ಡಿ-ವೃಂದದ ನೌಕರರನ್ನು ಟೆಂಡರ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವುದು, ಇತ್ಯಾದಿ.
2) ವಾಹನ ಚಾಲಕರು, ಡಿ-ವೃಂದದ ನೌಕರರಿಗೆ ವಿವಿಧ ಕಾರಣಗಳಿಗಾಗಿ ನೀಡುವ ಅನುಮತಿ ಪತ್ರ, ನಿರಾಕ್ಷೇಪಣಾ ಪತ್ರ, ಸಾಮಾನ್ಯ ಭವಿಷ್ಯ ನಿಧಿ ಮುಂಗಡ, ಸಾಮಾನ್ಯ ಭವಿಷ್ಯ ನಿಧಿಯಿಂದ ಭಾಗಶಃ ಹಿಂಪಡೆಯುವಿಕೆ, ನಿವೃತ್ತಿ ವೇತನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು, ಇತ್ಯಾದಿ.
3) ಸಿಆಸುಇ ಕಾರ್ಯಕಾರಿ ವಿಭಾಗದ ಭದ್ರತಾ ಶಾಖೆಗೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳ ನಿಯೋಜಿಸುವ ಮತ್ತು ಬಿಡುಗಡೆ ಮಾಡುವ ಬಗ್ಗೆ.
4) ವಾಹನ ಚಾಲಕ ವೃಂದದ ನೌಕರರ ನಿಯೋಜನೆ/ಒಪ್ಪಂದದ ನೇಮಕಾತಿ ಮತ್ತು ಬಿಡುಗಡೆ ಮಾಡುವ ಬಗ್ಗೆ.
5) ವಾಹನ ಚಾಲಕರು, ನಿಯೋಜನೆ ಮೇಲಿರುವ ಸಿಬ್ಬಂದಿಗಳು ಹಾಗೂ ಗ್ರೂಪ್ ಡಿ ಸಿಬ್ಬಂದಿಗಳ ವೇತನ ನಿಗದಿ, ವಾರ್ಷಿಕ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ, ವೈಯಕ್ತಿಕ ವೇತನ, ರಜೆ ಮಂಜೂರಾತಿ, ಗಳಿಕೆ ರಜೆ ನಗದೀಕರಣ, ಹಬ್ಬದ ಮುಂಗಡ, ವೈದ್ಯಕೀಯ ವೆಚ್ಚ ಮರುಪಾವತಿ, ಸ್ವಗ್ರಾಮ ಪ್ರಯಾಣ ರಿಯಾಯಿತಿ, ರಜಾ ಪ್ರಯಾಣ ರಿಯಾಯಿತಿ ಮಂಜೂರಾತಿ, ಇತ್ಯಾದಿ.
6) ನ್ಯಾಯಾಲಯ ಪ್ರಕರಣಗಳು, ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾಗುವ ಅರ್ಜಿಗಳಿಗೆ ಮಾಹಿತಿಯನ್ನು ನೀಡುವುದು, ವಿವಿಧ ಆಯೋಗ / ಸಮಿತಿ ಕೋರುವ ಮಾಹಿತಿಗಳನ್ನು ನೀಡುವುದು.
7) ಸೇವಾ ಪುಸ್ತಕಗಳ ನಿರ್ವಹಣೆ ಮತ್ತು ಸೇವಾ ವಿಷಯ ದಾಖಲೆ / ವಿಮಾ ಪ್ರಸ್ತಾವನೆ / ಸೇವಾ ದೃಢೀಕರಣ ಪತ್ರ / ಹೆಚ್. ಆರ್.ಎಂ.ಎಸ್. ನಮೂದುಗಳು.

(ಏ) <u>ಸಾರ್ವತ್ರಿಕ ರವಾನೆ ಶಾಖೆ:</u>

ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಿಗೆ ಬರುವ ಎಲ್ಲಾ ಸ್ವೀಕೃತಿಗಳನ್ನು ಆಯಾ ಇಲಾಖೆಗೆ ಹಂಚಿಕೆ ಮಾಡುವುದು ಹಾಗೂ ಸಚಿವಾಲಯದ ವಿವಿಧ ಇಲಾಖೆಗಳಿಂದ ರವಾನೆಯಾಗುವ ಪತ್ರಗಳನ್ನು ರವಾನಿಸುವುದು.

(ಐ) <u>ಆಡಳಿತ ಕೋಶ</u>:-

1) ಕರ್ನಾಟಕ ಸರ್ಕಾರ ಸಚಿವಾಲಯದ ಕಿರಿಯ ಸಹಾಯಕ, ಸಹಾಯಕ, ಹಿರಿಯ ಸಹಾಯಕ ಮತ್ತು ಶಾಖಾಧಿಕಾರಿ ವೃಂದ ಹಾಗೂ ಮೇಲ್ಪಟ್ಟ ವೃಂದಗಳ ಜೇಷ್ಠತಾ ಪಟ್ಟಿ ತಯಾರಿಕೆ. ಸಚಿವಾಲಯದ ದತ್ತಾಂಶ ನಮೂದು ಸಹಾಯಕ, ಶೀಘ್ರಲಿಪಿಗಾರ, ಹಿರಿಯ ಶೀಘ್ರಲಿಪಿಗಾರ ಮತ್ತು ಪತ್ರಾಂಕಿತ ಆಪ್ತ ಸಹಾಯಕ ವೃಂದ ಹಾಗೂ ಮೇಲ್ಪಟ್ಟ ವೃಂದಗಳ ಜೇಷ್ಠತಾ ಪಟ್ಟಿ ತಯಾರಿಕೆ ಹಾಗೂ ಸಚಿವಾಲಯದ ಗ್ರೂಪ್-ಡಿ, ವಾಹನ ಚಾಲಕ ವೃಂದ ಮತ್ತು ಗ್ರಂಥಾಲಯ, ಸಂಸದೀಯ ವ್ಯವಹಾರಗಳ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ವಿವಿಧ ವೃಂದಗಳ ಜೇಷ್ಠತಾ ಪಟ್ಟಿ ತಯಾರಿಕೆ.
2) ಕರ್ನಾಟಕ ಸರ್ಕಾರ ಸಚಿವಾಲಯದ ಶಾಖಾಧಿಕಾರಿ / ತತ್ಸಮಾನ ವೃಂದದ, ಸಚಿವಾಲಯದ ಗ್ರೂಪ್-ಸಿ / ತತ್ಸಮಾನ ವೃಂದದ ಮತ್ತು ಸಚಿವಾಲಯದ ಗ್ರೂಪ್-ಡಿ / ತತ್ಸಮಾನ ವೃಂದದ ಇಲಾಖಾ ವಿಚಾರಣೆ / ಲೋಕಾಯುಕ್ತ / ಕ್ರಿಮಿನಲ್ / ಶಿಸ್ತು ಪ್ರಕರಣಗಳು. ಇವುಗಳಿಗೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳು, ವಿಧಾನ ಸಭೆ ಮತ್ತು ವಿಧಾನ ಪರಿಷತ್ ಪ್ರಶ್ನೆಗಳು, ಮಾಹಿತಿ ಹಕ್ಕು ವಿಷಯಗಳು, ಶಾಖೆಯಲ್ಲಿನ ಇತರೆ ವಿಷಯಗಳು.

(ಒ) <u>ಸ್ವೀಕೃತಿ ಮತ್ತು ರವಾನೆ ಶಾಖೆ</u>:

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿರುವ ಎಲ್ಲಾ ವಿಭಾಗಗಳು ಹಾಗೂ ಶಾಖೆಗಳಿಗೆ ಸಂಬಂಧಿಸಿದ ಪತ್ರವನ್ನು ಸ್ವೀಕೃತಗೊಳಿಸುವುದು ಹಾಗೂ ರವಾನಿಸುವುದು. ಕಛೇರಿ ಕೆಲಸಕಾರ್ಯಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಎಲ್ಲಾ ವಿಭಾಗಗಳು ಹಾಗೂ ಶಾಖೆಗಳಿಗೆ ಒದಗಿಸುವುದು.

(ಓ) <u>ಲೆಕ್ಕಪತ್ರ-1:</u>

ಈ ಕೆಳಕಾಣಿಸಿದ ಸಚಿವಾಲಯದ ಇಲಾಖೆಗಳಲ್ಲಿನ ಗ್ರೂಪ್ 'ಎ', 'ಬಿ' ಅಧಿಕಾರಿಗಳ ಮತ್ತು ಗ್ರೂಪ್-'ಸಿ', 'ಡಿ' ನೌಕರರ, ಮಾನ್ಯ ಮುಖ್ಯಮಂತ್ರಿಗಳ, ಸಚಿವರುಗಳ ಆಪ್ತ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಮತ್ತು ಗ್ರೂಪ್-ಡಿ ನೌಕರರ ವೇತನ ಬಿಲ್ಲು ಹಾಗೂ ಪೂರಕ ಬಿಲ್ಲುಗಳಿಗೆ ಸಂಬಂಧಪಟ್ಟ ವಿಷಯಗಳು ಹಾಗೆಯೇ ಆದಾಯ ತೆರಿಗೆಗೆ ಸಂಬಂಧಿಸಿದ ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿನ ವಿಷಯಗಳು ಆದಾವುದೆಂದರೆ,

<u>ಲೆಕ್ಕಪತ್ರ-ಎ:</u>

1) ಕಾನೂನು ಇಲಾಖೆ.
2) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ.
3) ಕೃಷಿ ಮತ್ತು ತೋಟಗಾರಿಕೆ ಇಲಾಖೆ.
4) ಸಮಾಜ ಕಲ್ಯಾಣ ಇಲಾಖೆ.
5) ಅರಣ್ಯ ಜೀವಿಶಾಸ್ತ್ರ, ಮತ್ತು ಪರಿಸರ ವಿಜ್ಞಾನ ಇಲಾಖೆ.
6) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
7) ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
8) ಒಳಾಡಳಿತ ಮತ್ತು ಸಾರಿಗೆ ಇಲಾಖೆ.
9) ಸಹಕಾರ ಇಲಾಖೆ.
10) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
11) ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

12) ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ.
13) ಶಿಕ್ಷಣ ಇಲಾಖೆ.
14) ಯೋಜನೆ ಇಲಾಖೆ.
15) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
16) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
17) ಆರ್ಥಿಕ ಇಲಾಖೆ.

ಲೆಕ್ಕಪತ್ರ-ಬಿ:

1) ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳಿಗೆ ಮತ್ತು ಸಚಿವಾಲಯದ ಗ್ರೂಪ್-ಡಿ ನೌಕರರಿಗೆ ಸಂಬಂಧಿಸಿದಂತೆ ವೇತನ ಮತ್ತು ಪೂರಕ ಬಿಲ್ಲುಗಳು.
2) ಆದಾಯ ತೆರಿಗೆ ಕಟಾವಣೆ ಬಗ್ಗೆ.
3) ಗ್ರೂಪ್-ಎ ಮತ್ತು ಗ್ರೂಪ್-ಬಿ ವೈದ್ಯಕೀಯ ಬಿಲ್ಲುಗಳು, ಮೋಟಾರು ವಾಹನ ಮುಂಗಡ, ಗೃಹ ಖರೀದಿ ಮುಂಗಡ, ಗೃಹ ನಿರ್ಮಾಣ ಮುಂಗಡ ಮತ್ತು ಗಣಕ ಯಂತ್ರ ಖರೀದಿ ಮುಂಗಡಗಳಿಗೆ ಸಂಬಂಧಪಟ್ಟಂತೆ ವಸೂಲಾತಿ ವಿಷಯಗಳು.
4) ತಪ್ಪಿಹೋದ ಜಮೆಗಳಿಗೆ ಸಂಬಂಧಪಟ್ಟ ವಿಷಯಗಳು.
5) ಸಿಆಸುಇ ಲೆಕ್ಕಪತ್ರ-1 ವಿಭಾಗದ ನಗದು ಪುಸ್ತಕ ನಿರ್ವಹಣೆ.

ಲೆಕ್ಕಪತ್ರ-ಸಿ:

1) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
2) ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳ ಕಛೇರಿ.
3) ಕಂದಾಯ ಇಲಾಖೆ.
4) ಕಾರ್ಮಿಕ ಇಲಾಖೆ.
5) ಜಲ ಸಂಪನ್ಮೂಲ ಇಲಾಖೆ.
6) ಇಂಧನ ಇಲಾಖೆ.
7) ಮುಖ್ಯಮಂತ್ರಿ/ಸಚಿವ ಸಂಪುಟದ ಸಚಿವರು/ರಾಜ್ಯದ ಮಂತ್ರಿಗಳ ಆಪ್ತ ಶಾಖೆಗಳು.
8) ಸಾರ್ವಜನಿಕ ಕುಂದುಕೊರತೆಗಳ ಕೋಶ (ಜನಸ್ಪಂದನ ಕೋಶ).
9) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ.
10) ವಸತಿ ಇಲಾಖೆ.
11) ನಗರಾಭಿವೃದ್ಧಿ ಇಲಾಖೆ.
12) ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ.
13) ಲೋಕೋಪಯೋಗಿ ಇಲಾಖೆ.

ಸಿಆಸುಇ ಲೆಕ್ಕಪತ್ರ ವಿಭಾಗದಲ್ಲಿ ಮೇಲಿನಂತೆ HRMS ತಂತ್ರಾಂಶದೊಂದಿಗೆ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಖಜಾನೆ-2 ವ್ಯವಸ್ಥೆಯಡಿ ವೇತನವನ್ನು ವಿತರಿಸುವ ಕೆಲಸದ ಜೊತೆಯಲ್ಲಿ ನಿವೃತ್ತಿ, ನಿಯೋಜನೆ, ದಂಡನೆ ಇತ್ಯಾದಿಗಳಿಗೆ ಸಂಬಂಧದಲ್ಲಿ ಅಂತಿಮ ವೇತನ ಪ್ರಮಾಣ ಪತ್ರವನ್ನು ನೀಡುವುದು ಹಾಗೂ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರುಗಳ ಕೆ.ಜಿ.ಐ.ಡಿ., ಜಿ.ಪಿ.ಎಫ್., ಎಲ್.ಐ.ಸಿ. ಕಂತುಗಳು, ಸಾಲಗಳ ಬಗ್ಗೆ ವಿಮಾ ಕಂತುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು. ಅದಲ್ಲದೆ, ಕೆ.ಜಿ.ಐ.ಡಿ., ಜಿ.ಪಿ.ಎಫ್. ಇತ್ಯಾದಿ ಸಾಲ/ಹಿಂಪಡೆಯಲು ನಿಗಧಿತ ನಮೂನೆಯಲ್ಲಿ ವಿವರಗಳನ್ನು ನೀಡುವ ಕೆಲಸ ಕಾರ್ಯಗಳು, ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿ/ಸಚಿವರುಗಳ ಆಪ್ತ ಶಾಖೆಗಳಲ್ಲಿ ನಿವೃತ್ತಿ ನಂತರ ಒಪ್ಪಂದದ ಆಧಾರದ ಮೇಲೆ

ನೇಮಕಗೊಂಡ ಹಾಗೂ ನಿಗಮ / ಮಂಡಳಿ / ಸಚಿವಾಲಯದ ಇಲಾಖೆಗಳಿಂದ ನೇಮಕಗೊಂಡ ಅಧಿಕಾರಿ / ನೌಕರರುಗಳಿಗೆ ಖಜಾನೆ-2 ಲೆಕ್ಕಶೀರ್ಷಿಕೆಯಡಿ ವೇತನವನ್ನು ಪಾವತಿಸುವ ಕಾರ್ಯನಿರ್ವಹಿಸಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಆದಾಯ ತೆರಿಗೆ ನಿಯಮಗಳಲ್ಲಿ ಆಗಿರುವ ಬದಲಾವಣೆಗಳಂತೆ ತ್ರೈಮಾಸಿಕವಾಗಿ ಗಣಕೀಕೃತ ವರದಿಯನ್ನು ಆದಾಯ ತೆರಿಗೆ ಇಲಾಖೆಗೆ ಒದಗಿಸುವುದು; ಆದಾಯ ತೆರಿಗೆ ಕಟಾವಣೆಗೆ ಸಂಬಂಧಿಸಿದಂತೆ ಅಧಿಕಾರಿ ಮತ್ತು ನೌಕರರುಗಳಿಂದ ವಿವರಗಳನ್ನು ಪಡೆದು ಸೂಕ್ತವಾಗಿ ಆದಾಯ ತೆರಿಗೆ ಕಟಾವಣೆಯನ್ನು ಮಾಡುವುದು; ವರ್ಷದ ಅಂತ್ಯದಲ್ಲಿ ಸಚಿವಾಲಯದ ಅಧಿಕಾರಿ ಮತ್ತು ನೌಕರರರಿಗೆ ಹಾಗೂ ನಿವೃತ್ತಿ ನಂತರ ಒಪ್ಪಂದದ ಆಧಾರದ ಮೇಲೆ ನೇಮಕಗೊಂಡ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳಿಗೆ Form No-16ನ್ನು ಒದಗಿಸುವುದು; ಇತ್ಯಾದಿ ಕೆಲಸವನ್ನು ನಿಗದಿತ ಅವಧಿಯೊಳಗೆ ಸಿಆಸುಇ(ಲೆಕ್ಕಪತ್ರ-1) ವಿಭಾಗದಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.

<u>ಸಿಆಸುಇ (ಲೆಕ್ಕಪತ್ರ-1) ವ್ಯಾಪ್ತಿಯಲ್ಲಿರುವ ಆಯವ್ಯಯ ಮತ್ತು ಸಾಮೂಹಿಕ ವಿಮಾ ಯೋಜನೆ ಶಾಖೆಯಲ್ಲಿ ನಿರ್ವಹಿಸುವ ವಿಷಯಗಳು.</u>

- ರಾಜ್ಯದ ಎಲ್ಲಾ ಸಚಿವರ ಕಛೇರಿಗಳಿಗೆ / ಮಾನ್ಯ ಮುಖ್ಯಮಂತ್ರಿಯವರ / ಉಪ ಮುಖ್ಯಮಂತ್ರಿಯವರ ಹಾಗೂ ಅಧೀನ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಸಚಿವಾಲಯದ ಎಲ್ಲಾ ಅಧಿಕಾರಿಗಳ ಕಛೇರಿಗೆ ಸರಬರಾಜು ಆದ ದಿನಪತ್ರಿಕೆ / ನಿಯತಕಾಲಿಕೆಗಳ ಬಿಲ್ಲುಗಳನ್ನು ನಿರ್ವಹಿಸುವುದು.

- ಸಂಸದೀಯ ವ್ಯವಹಾರಗಳು ಮತ್ತು ಕಾನೂನು ಇಲಾಖೆಯೂ ಸೇರಿದಂತೆ ಸಚಿವಾಲಯ ಗ್ರಂಥಾಲಯಗಳಿಗೆ ಸರಬರಾಜು ಆದ ದಿನಪತ್ರಿಕೆ / ನಿಯತಕಾಲಿಕೆಗಳ / ಪುಸ್ತಕಗಳ ಬಿಲ್ಲುಗಳನ್ನು ನಿರ್ವಹಿಸುವುದು.

- ಸಚಿವಾಲಯ ಇಲಾಖೆಗಳ ಶಾಖಾಧಿಕಾರಿಗಳ ಮತ್ತು ತತ್ಸಮಾನ ಹುದ್ದೆಯ ಪತ್ರಾಂಕಿತ ಆಪ್ತ ಸಹಾಯಕರ ಮೊಬೈಲ್ ಬಿಲ್ಲುಗಳನ್ನು ನಿರ್ವಹಿಸುವುದು.
- ಸಿಆಸುಇ (ಕಾರ್ಯಕಾರಿ) ಭದ್ರತಾ ವಿಭಾಗದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹರಕ್ಷಕದಳದ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲಾಗುತ್ತಿದೆ.
- ಸಚಿವಾಲಯದ ಅಧಿಕಾರಿಗಳ / ಸಿಬ್ಬಂದಿಗಳ ವೇತನ ಭತ್ಯೆಗಳ ವಾರ್ಷಿಕ ಆಯವ್ಯಯ ಅಂದಾಜು(ಅಪೆಂಡಿಕ್ಸ್-ಬಿ)ನ್ನು ತಯಾರಿಸುವುದು.

- ಮಹಾಲೇಖಪಾಲರ ಲೆಕ್ಕಗಳಿಗೆ ಲೆಕ್ಕಗಳ ಮರುಹೊಂದಾಣಿಕೆ (Reconciliation) ಮಾಡುವುದು ಹಾಗೂ ಪುನರ್ವಿನಿಯೋಗ (Re-appropriation) / ಹೆಚ್ಚುವರಿ ಅನುದಾನ ಪಡೆಯುವುದು / ವರ್ಷದ ಅಂತಿಮದಲ್ಲಿ ಉಳಿತಾಯದ ಮೊಬಲಗನ್ನು ಅಧ್ಯರ್ಪಣೆ ಮಾಡುವುದು ಹಾಗೂ ಆಯವ್ಯಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳು.

- ಆಡಿಟ್ ಪ್ಯಾರಾಗಳಿಗೆ / ಆಡಿಟ್ ಆಕ್ಷೇಪಣೆಗಳಿಗೆ ಉತ್ತರಗಳನ್ನು ಸಿದ್ಧಪಡಿಸುವುದು / ಮಹಾಲೇಖಪಾಲರ ಕಚೇರಿಯ ತಪಾಸಣಾ ಕಾರ್ಯಕ್ಕೆ ಅನುವು ಮಾಡಿಕೊಡುವುದು.

- ಕರ್ನಾಟಕ ಸರ್ಕಾರ ಸಚಿವಾಲಯ ಸಿಬ್ಬಂದಿಗಳಿಗೆ ವಿತರಣೆಯಾಗದೇ ಉಳಿದಿರುವ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ವಿತರಿಸುವುದು.

1) ರಾಜ್ಯ ವೃಂದದಲ್ಲಿರುವ ಎಲ್ಲಾ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಅಧಿಕಾರಿಗಳಿಗೆ ಸಂಬಂಧಿಸಿದ ಕೇಂದ್ರ ಸಾಮೂಹಿಕ ವಿಮಾ ಯೋಜನೆಯ ಮಾಹೆಯಾನ ವಂತಿಗೆಯ ಚೆಕ್ / ಡಿ.ಡಿ.ಯನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಖಜಾನೆ-2 ವ್ಯವಸ್ಥೆಯಡಿ ಜಮಾ ಮಾಡುವುದು. ಹಾಗೆ ಜಮೆಯಾದ ಮೊತ್ತವನ್ನು ಮೂರು ತಿಂಗಳಿಗೊಮ್ಮೆ ಖಜಾನೆಯಿಂದ ಹಿಂಪಡೆದು ಕೇಂದ್ರ ಸರ್ಕಾರಕ್ಕೆ ನೆಫ್ಟ್ ಮೂಲಕ ಕಳುಹಿಸುವುದು. ಸದರಿ ಅಧಿಕಾರಿಗಳ ಮರಣ / ನಿವೃತ್ತಿ ನಂತರ ಯೋಜನೆಯಡಿ ಅವರಿಗೆ ಲಭ್ಯವಾಗುವ ಕ್ರೋಢೀಕೃತ ಮೊತ್ತವನ್ನು ರಾಜ್ಯದ ಲೆಕ್ಕದಿಂದ ಪಾವತಿಸಿ, ಆ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಹಿಂಭರಿಸಿಕೊಂಡು ರಾಜ್ಯದ ಲೆಕ್ಕಕ್ಕೆ ಜಮಾ ಮಾಡುವುದು. ಅಂತಿಮವಾಗಿ ಈ ಲೆಕ್ಕ ಹೊಂದಾಣಿಕೆಯ ವರದಿಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು.

